SRI MANIKRAO PATIL :—Sir, it is not a fact that the Deputy Superintendent of Police, the Circle Inspector and other police officers are threatening the villagers. In fact, this is a factions village where faction has developed between two cousins on account of two parties, one lead by Sri K. V. Krishnappa and the other by Sri G Muniswamiah This faction has developed on a land dispute on account of rivalry between the cousins.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ :—ಸ್ವಾಮಿ, ಇದೇ ಸಭೆಯ ಒಬ್ಬ ಮಾನ್ಯ ಸದಸ್ಯರು ಅಲ್ಲಿನ ಅಧಿಕಾರಿಗಳಿಗೆ ಪತ್ರ ಬರೆದು ಅಲ್ಲಿನ ಡೈರಿಫಾರಂ ಸೊಸೈಟಿಗೆ ದುಡ್ಡನ್ನು ಕೊಡಕೂಡದೆಂದು ತಿಳಿಸಿಲ್ಲವೆ ? ಅಲ್ಲಿ ಜಗಳವಾಗಿರತಕ್ಕ ಎರಡು ಗುಂಪುಗಳ ಪೈಕಿ ಯಾರ ಮೇಲೆ ಈಗ ೧೦೭ಕ್ಕೆ ಬುಕ್ ಮಾಡಿ ಕೇಸುಗಳನ್ನು ದಾಖಲ್ಮಾಡಲಾಗಿದೆಯೋ ಅವರಿಗೇ ಹೆಚ್ಚು ಹೊಡತಗಳು ಬಿದ್ದಿದ್ದು. ಅವರು ಅನೇಕ ಮೆಡಿಕಲ್ ಸರ್ಟಿಫಿಕೇಟುಗಳನ್ನು ಹಾಜರ್ಮಾಡಿಲ್ಲವೇ ? ಅಲ್ಲಿರತಕ್ಕ ಫೋಲೀಸರನ್ನು ಬೇರೆ ಕಡೆಗೆ ವರ್ಗ ಮಾಡಿ ಅಲ್ಲಿ ಈ ವಿಚಾರಣೆಮಾಡಿ ಎಂದು ನಾವು ಕೇಳಿರಲಿಲ್ಲವೇ ? ಅಲ್ಲಿ ಸಣ್ಣ ಸಣ್ಣ ಮಕ್ಕಳಿ ಗೆಲ್ಲಾ ಏಟುಗಳು ಬಿದ್ದಿಲ್ಲವೆ ? ಸ್ತ್ರೀಯರಿಗೆ ಮಾನಭಂಗ ಮಾಡಿಲ್ಲವೇ ? ಆದ್ದರಿಂದ ಇದಕ್ಕೆ ಒಂದು ಹೈಲೆವಲ್‌ವೆ ಕಮಿಟಿ ಮಾಡಿ ವಿಚಾರಣೆ ಮಾಡಿ ಅಲ್ಲಿ ಲಾ ಅಂಡ್ ಆರ್ಡರ್‌ನ್ನು ಸ್ಟಾಪಿಸಿ, ಇಲ್ಲವಾದರೆ ಇನ್ನು ಅನೇಕ ಅನಾಹುತಗಳಾಗಬಹುದು. ಆದರೆ ಹಾಗೆ ಯಾವುದಕ್ಕೂ ಅವಕಾಶ ಕೊಡುವುದಿಲ್ಲವೆಂಬ ಬಗ್ಗೆ ಮಾನ್ಯ ಮಂತ್ರಿಗಳು ನಮಗೆ ಒಂದು ಅಷ್ಯೂರೆನ್ಸ್‌ನ್ನು ಕೊಡುತ್ತಾರೆಯೇ.

SRI MANIKRAO PATIL :—Sir, I do not know whether any M.L.A. has written any letter to the Government for withholding the loan to be paid to Harijans. I can say that under Section 107 proceedings have been instituted against both the parties and the cases are not pending before the Sub-Divisional Magistrate. So far as the law and order arrangements are concerned, we have already deputed two police Constables temporarily, and instructions have also been issued to the Circle Inspector and Sub-Inspector of Police to visit the village frequently so that no untoward incident take place. The statement of the HON. Member is far from truth and I completely deny those charges.

BUDGET ESTIMATES FOR 1970-71 :

(DEMANDS FOR GRANTS)

DEMANDS No. 6, 29, 30, 30A, 30B, 31, 31A, 32, 43, 45, 46, 47, 48, 50, and 50A.

SRI K. LAKKAPPA (Minister for Public Works):—Sir, on the recommendation of the Governor, I beg to move

> " That a sum not exceeding Rs. 16,87,000 be granted to the Government to defray the charges which will come in course of payment during the financial year for the period ending 31st day of March 1971, in respect of " Other Taxes and Duties ."

MR SPEAKER :—Motion moved :

" That a sum not exceeding Rs. 16,87,000 be granted to the Government to defry the charges which will come in course of payment during the financial year for the period ending 31st day of March 1971, in respect of " Other Taxes and Duties '. "

DEMANDS Nos. 29. 30, 30A, 45, 47, 31, 31A, 43, 48, 30B, 46, 32, 50 and 50A are deemed to have been moved and all the Demand- are before the House for debate.

I call upon Sri H. N. Nanje Gowda to initiate the Debate. Before he commences, I would like to say that it is the privilege of recognised parties to just initiate the debate. Sri Nanje Gowda, has not joined the S.V.D. If both sides agreed and have no objection to his initiating the debate it could be done. I have ascertained from the Whips and they have agreed that Sri Nanja Gowda be permitted to initiate the debate, and so have permitted him. But the right to initiate the debate goes to recognised parties?

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು) :—ಮಾನ್ಯ ಅಧ್ಯಕ್ಷರೇ, ನಾನು ಈಗ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ನಡೆಯ ಬೇಕಾದ ಚರ್ಚೆಯಲ್ಲಿ ಭಾಗವಹಿಸತಕ್ಕ ಕಾಲದಲ್ಲಿ ಒಹಳ ಕಳವಳಕ್ಕೂ ಮತ್ತು ಭಾರಿ ಚಿಂತೆಗೂ ಒಳಗಾಗಿದ್ದೇನೆ; ಅಷ್ಟು ಚಿಂತಾಕ್ರಾಂತನಾಗಿದ್ದೇನೆ, ರಾಜ್ಯದಲ್ಲಿ ನಿರೀಕ್ಷಿತ ರೀತಿಯಲ್ಲಿ ದೇಶಾಭಿವೃದ್ಧಿಯ ಕೆಲಸಕಾರ್ಯಗಳು ಆಗುತ್ತಿಲ್ಲ ಎಂಬುದು ನಾನು ಚಿಂತಾಕ್ರಾಂತನಾಗುವುದಕ್ಕೆ ಒಂದನೆಯ ಕಾರಣ. ಇನ್ನೊಂದು ಕಾರಣವೆಂದರೆ ಈ ಬೇಡಿಕೆಗಳ ಸಂಬಂಧವಾದ ಇಲಾಖೆಗಳ ಬಗ್ಗೆ ಗುರುತರವಾದ ಆಪಾದನೆಗಳಿವೆ ಎಂದು ಹೇಳತಕ್ಕ ಕಾಲದಲ್ಲಿ ಆ ಆಪಾದನೆಗಳಿಗೆ ಸಂಬಂಧಪಟ್ಟ ಮುಖ್ಯ ಮಂತ್ರಿಗಳು ಬದ್ಧರಾಗದೆ ಅವರು ಈ ಸಭೆಗೆ ತಪ್ಪು ಅಂಕೀಅಂಶಗಳನ್ನು ಕೊಟ್ಟು ಈ ಸಭೆಯನ್ನು ತಮ್ಮ ದಾರಿಗೆಳೆಯುತ್ತಿದ್ದಾರೆ. ಇದರಿಂದಲೂ ಕೂಡ ನಾನು ಬಹಳ ಚಿಂತಾಕ್ರಾಂತನಾಗಿದ್ದೇನೆ. ನಾನು ಈ ಬೆಂಗಳೂರು ನೀರಿನ ಯೋಜನೆ ಮತ್ತು ಮಂಗಳೂರಿನ ಗೊಬ್ಬರ ಕಾರ್ಖಾನೆಯ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಸಂಬಂಧೀಕರನ್ನು ದೊಡ್ಡ ಅಧಿಕಾರ ಸ್ಥಾನದಲ್ಲಿ ಇಟ್ಟಿದ್ದಾರೆಂದು ಆಪಾದನೆ ಮಾಡಿದ್ದರೆ ಬಗ್ಗೆ ಅವರು ಅಲ್ಲಿನ ಅಧಿಕಾರಿಗಳಿಗೂ ತಮಗೂ ಯಾವ ಸಂಬಂಧವು ಇಲ್ಲವೆಂದು ಹೇಳಿಕೆ ಕೊಟ್ಟಿರತಕ್ಕುದ್ದು ಬಹಳ ವಿಷಾದಕರವಾದ್ದು ಹಾಗೆ ಅವರು ನನಗೂ ಆ ಅಧಿಕಾರಿಗಳಿಗೂ ಏನೂ ಸಂಬಂಧವಿಲ್ಲ ಎಂದು ಹೇಳಿರತಕ್ಕದ್ದು ಅವರಿಗೆ ಒಂದು ಭಾರಿ ಕಳಂಕಪ್ರಾಯವಾದದ್ದು ಎಂದು ನಾನು ಭಾವಿಸುತ್ತೇನೆ. ಅವರು ತಮಗೆ ಸಂಬಂಧವಿದೆ ಎಂದು ಹೇಳಿದ್ದರೇನು ತಪ್ಪಾಗುತ್ತಿತ್ತು ? ಅವರಿಗೆ ಸಂಬಂಧವಿದ್ದ ಮಾತ್ರಕ್ಕೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನವನ್ನು ಕೊಟ್ಟಿದ್ದರೆ ಅದರಲ್ಲಿ ತಪ್ಪೇನಿದೆ ? ಅವರು ಅದನ್ನು ಒಪ್ಪಿದ್ದರೆ ನಾನು ಅವರ ಮಾತುಗಳಿಗೆ ತುಂಬಾ ಬೆಲೆ ಕೊಡುತ್ತಿದ್ದೆ. ಆದರೆ ಅವರು ಅದನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡಿದ್ದು ಸರಿಯಲ್ಲ. ನಾನು ಆ ವಿಚಾರವನ್ನ ಶಂಕರ ಕೇಣಿಯವರಿಂದ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಷಡ್ಡಕರಾಗಿರತಕ್ಕ ಕುರುತುಕೋಟಿ ಇವರಿಂದ ತಿಳಿದು ಕೊಂಡಿದ್ದು. ಆದಾಗ್ಯೂ ಅವರು ಅದನ್ನು ಮುಚ್ಚುಹಾಕಿದ್ದಾರೆ.

ಇನ್ನು ಈ ದಿವಸ ನಮ್ಮ ಮುಂದೆ ಚರ್ಚೆಗೆ ಬಂದಿರತಕ್ಕ ಲೋಕೋಪಯೋಗಿ ಇಲಾಖೆ ವಿಚಾರದಲ್ಲಿ ಮಾತನಾಡುವುದಕ್ಕೆ ಮುನ್ನ ನನಗೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತಿದೆ. ನಾನು ಈ ಪಿ.ಡಬ್ಲ್ಯು.ಡಿ.ಗೆ ಒಂದು ಟೈಟಿಲ್‌ನ್ನು ಕೊಡಬೇಕೆಂದಿದ್ದೇನೆ. ಆದು ಏನೆಂದರೆ ಈ ಇಲಾಖೆಗೆ ದ್ರೌಪತಿ ಎಂಬ ಹೆಸರನ್ನು ಇಟ್ಟು ಕರೆಯಬೇಕು ಎಂದು.ಕ್ಕಿವಿಕೆಂದರೆ ಆ ದ್ರೌಪತಿಗೆ ೫ ಜನ ಗಂಡಂದಿರು ಇದ್ದಹಾಗೆ ಈ ಪಿ. ಡಬ್ಲ್ಯು. ಡಿ.ಗೂ ೫ ಜನ ಮಂತ್ರಿಗಳು ಇದ್ದಾರೆ. ಶ್ರೀಮಾನ್ ದೊಡ್ಡಮೇಟಿ ಅವರು ಧರ್ಮರಾಯನಿದ್ದಹಾಗೆ, ಶ್ರೀಮಾನ್ ಕೆ. ಲಕ್ಕಪ್ಪನವರು ಭೀಮನಿದ್ದ ಹಾಗೆ ಮತ್ತು ನಮ್ಮ ಮುಖ್ಯ ಮಂತ್ರಿಗಳು ಅರ್ಜುನ ಇದ್ದ ಹಾಗೆ, ಇನ್ನು ಆ ಶ್ರೀ ಪರಮೇಶ್ವರಪ್ಪ ಮತ್ತು ಮಗಾವಿಯವರು—ನಕುಲಸಹದೇವರಿದ್ದಂತೆ. ಇವರಿವರಲ್ಲಿ ಏನಾದರೂ ಜಗಳ ಬಂದರೆ ಅದನ್ನು ಪರಿಹರಿಸತಕ್ಕ ಕೃಷ್ಣ ಪರಮಾತ್ಮ ಯಾರೆಂದರೆ ಶ್ರೀಮಾನ್ ಎಚ್. ಡಿ.

(ಶ್ರೀ ಎಚ್. ಎಸ್. ನಂಜೇಗೌಡ)

ದೇವೇಗೌಡರು ಒಂದಾವರ್ತಿ ಶ್ರೀ ಕೆ. ಲಕ್ಕಪ್ಪನವರು ಯಾರನ್ನೋ ಒಬ್ಬರನ್ನು ವರ್ಗ ಮಾಡಿದರಂತೆ, ಅದನ್ನು ಮುಖ್ಯ ಮಂತ್ರಿಗಳು ಕ್ಯಾನಸಲ್ ಮಾಡಿದರು, ನಾನೇತಕ್ಕೆ ಮಂತ್ರಿಯಾಗಿರಬೇಕು ಎಂದು ಲಕ್ಕಪ್ಪನವರು ಒಪಳ ಬೇಜಾರಿನಲ್ಲಿದ್ದಾಗ ಅವರನ್ನು ಸಮಾಧಾನ ಮಾಡುವುದಕ್ಕೆ ಶ್ರೀ ದೇವೇಗೌಡರು ಮಧ್ಯಸ್ಥಿಕೆ ವಹಿಸಿದ್ದರೆಂದು ಕೇಳಿದ್ದೇನೆ. ಆದರೆ ಆ ಆರ್ಜುನನಿಗೆ ಆ ದ್ರೌಪತಿ ಒಬ್ಬಳೇ ಅಲ್ಲದೆ ಸುಭದ್ರೆ ಬೇರೆ ಇದ್ದಹಾಗೆ ನಮ್ಮ ಮುಖ್ಯ ಮಂತ್ರಿಗಳಿಗೆ ಈ ಪಿ.ಡಬ್ಲ್ಯು.ಡಿ. ಒಂದಲ್ಲದೆ ಇದರ ಜೊತೆಗೆ ಹೋಂ ಇಲಾಖೆ ಬೇರೆ. ಈ ಎರಡು ಒಂದೊಂದೂ ದೊಡ್ಡ ಇಲಾಖೆಗಳೇ. ಒಂದನ್ನು ಇಟ್ಟುಕೊಂಡು ಸರಿಯಾಗಿ ಕೆಲಸ ಮಾಡುವುದೇ ಕಷ್ಟ ಎನ್ನುತ್ತಿರುವಾಗ ಈ ಎರಡು ದೊಡ್ಡ ಇಲಾಖೆಗಳನ್ನು ಇಟ್ಟು ಕೊಂಡು ಇರುವುದರಿಂದಲೇ ನೀರಾವರಿ ಯೋಜನೆಗಳ ಕೆಲಸಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಈ ನೀರಾವರಿ ಕಾಮಗಾರಿಗಳ ವಿಚಾರದಲ್ಲಿ ದಿನವಹಿ ತಲೆ ಕೆಡಿಸಿಕೊಳ್ಳತಕ್ಕ ಸಂದರ್ಭಗಳು ಬೇರೆ ಉದ್ಭವಿಸುತ್ತಿದೆ.

12-00 NOON

(DEPUTY SPEAKER in the Chair)

Major Irrigation is not an easy thing. ಈವೊತ್ತಿನ ದಿವಸ ರಾಜ್ಯದ ಪ್ರಧಾನ ಸಮಸ್ಯೆಯಾಗಿರತಕ್ಕ ಕಾವೇರಿ, ಕೃಷ್ಣ ಇನ್ನೂ ಇತರ ಡಿಸ್ಪ್ಯೂಟಿಗಳು ಏನು ಇವೆ ಈ ನೀರಾವರಿ ಯೋಜನೆಗಳ ಬಗ್ಗೆ ೨೮ ಗಂಟೆ ಕಾಲ ಅಲ್ಲ ೪೮ ಗಂಟೆಗಳ ಕಾಲ ಕೆಲಸ ಮಾಡಿದರೂ ಸಾಕಾಗುವುದಿಲ್ಲ. ಈ ನೀರಾವರಿ ಖಾತೆಯನ್ನು ಬೇರೆಯವರಿಗೆ ಕೊಡಿ ಎಂದು ನಾನು ಹೇಳುವುದಿಲ್ಲ. ಆದಕ್ಕೆ ಬೇಕಾದಷ್ಟು ಕೆಲಸ ಇರುವುದರಿಂದ ಈ ಬಾಬಿಗೆ ಇವರೇ ಪಾಸಿ ಆದುದರಿಂದ ಈ ಖಾತೆಯನ್ನು ಇವರೇ ಇಟ್ಟುಕೊಂಡು ಜಿ.ಎ.ಡೀ ಮತ್ತು ಗೃಪ ಖಾತೆಯನ್ನು ಬೇರೆಯವರಿಗೆ ವಹಿಸಿ, ಇದರಿಂದ ವಿಮುಕ್ತಿ ಮಾಡಿಕೊಳ್ಳಿ. ಈ ದ್ರೌಪತಿಯಿಂದ ತಪ್ಪಿಸಿಕೊಳ್ಳಿ ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಈವಾಗ ನಾನು ಹೇಮಾವತಿ ಯೋಜನೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ. ನಮ್ಮ ಮೇಲೆ ಕೇಂದ್ರದವರು ಮಣ್ಣು ಎರಚುತ್ತಿದ್ದಾರೆ How are we to face it.? Let us face the facts. ನನಗೆ ತಿಳಿದ ಮಟ್ಟಿಗೆ ಮಾನ್ಯ ಮುಖ್ಯ ಮಂತ್ರಿಗಳು ಎಂದೂ ಇದರ ಬಗ್ಗೆ ರಿಯಲ್ ಫ್ಯಾಕ್ಟ್ಸ್ ಇಡುವುದಕ್ಕೆ ಪ್ರಯತ್ನ ಮಾಡಿಲ್ಲ. ಈ ತರಹ ಫ್ಯಾಕ್ಟ್ಸ್‌ನ್ನು ಮುಚ್ಚಿಡುವುದು ಸರಿಯೇ ? ಎಂದು ಹೇಳುತ್ತೇನೆ.

ಇನ್ನು ಹೇಮಾವತಿ ಬಗ್ಗೆ ಹೇಳುವುದಾದರೆ ಸ್ಕ್ರೀಪರ್ಸ್ ರಿಪೇರಿಗೆ ಖನ್ನಾ ಕಂಪನಿಗೆ ೪ ಲಕ್ಷ ೮೦ ಸಾವಿರ ರೂಪಾಯಿ ಕೊಟ್ಟು ರಿಪೇರಿ ಮಾಡಿಸಿದರು ಅದು ಬಹುಶಃ ರಿಪೇರಿ ಆಗಿ ಒಂದು ವರ್ಷ, ೨ ವರ್ಷ ಆಗಿದೆ. ಒಟ್ಟು ೬ ಸ್ಕ್ರೀಪರ್ಸ್‌ನಲ್ಲಿಳಸ್ಟು ಹೇಮಾವತಿಯಲ್ಲಿ ಇಟ್ಟಿದ್ದಾರೆ. ಇನ್ನು ಎರಡು ಅಲ್ಲೇ ಉಳಿದಿದೆ. ಈ ನಾಲು ಸ್ಕ್ರೀಪರ್ಸ್ ಕೆಲಸಮಾಡಿರುವುದು ನೋಡಿದರೆ ಒಟ್ಟು ೬೦ ಗಂಟೆಗಿಂತ ಹೆಚ್ಚು ಕೆಲಸ ಮಾಡಿಲ್ಲ. ಮಾಡುತ್ತೇನೆ. ಈಗ ಅದನ್ನು ಹರಾಜು ಹಾಕುವುದಕ್ಕೆ ಹೊರಟಿದ್ದಾರೆ. ಈಗ ಇದರ ರೀಪೇರಿ ಖರ್ಚು ಅದನ್ನು ಸಾಬೀತುಳಿ ಲಕ್ಷ ೮೦ ಸಾವಿರ ರೂಪಾಯಿ ಆಗಿದ್ದರೆ ೨ ೨/೧ ಲಕ್ಷಕ್ಕೆ ಮಾರಾಟ ಮಾಡುವುದಕೆ ನಡೆಯುತ್ತಾ ಇದೆ. ಇದಕ್ಕೆ ಟೆಂಡರ್ ಕರೆದಿದ್ದಾರೆ. ಈ ರೀತಿ ಇರುವ ೨ ೧/೨ ಲಕ್ಷಕ್ಕೆ ಶೀರ್ಮಾನ ವ್ಯವಹಾರ ಮಾಡಿರುವುದನ್ನು ನೋಡಿದರೆ ಇದು ಸರ್ಕಾರಕ್ಕೆ ಒಳ್ಳೆಯದಲ್ಲ ಎಂದು ಹೇಳುತ್ತೇನೆ. ನನಗೆ ತಿಳಿದಮಟ್ಟಿಗೆ ಕೆಲವು ಟೆಕ್ನಿಕಲ್ ಎಕ್ಸ್‌ಪರ್ಟ್ಸ್‌ನ್ನು ಕೇಳಿದೆ ಅವರು ಇದರ ರಿಪೇರಿಗೆ ೭೨ ೮೦ ಸಾವಿರ ರೂಪಾಯಿಯಷ್ಟು ಖರ್ಚು ಮಾಡಿದ್ದಾರೆ ಅದೇ ಹೆಚ್ಚು ಅಂತ ಹೇಳಿದರು. ಈ ರೀತಿ ಮಾಡುವುದು ಒಳ್ಳೆಯದಲ್ಲ. ಇದನ್ನು ಗಮನಿಸಬೇಕು ಎಂದು ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಈ ಪ್ರಾಜೆಕ್ಟಿನ ವಿಚಾರದಲ್ಲಿ ಮೊದಲು ಹೇಳಿದ್ದೇನೆ, ಈಗಲೂ ಹೇಳುತ್ತೇನೆ. ಇದನ್ನು ಬಾಲಾಜಿ ಅಂಡ್ ಕೋ ಅವರಿಗೆ ಕೊಟ್ಟರು ಜನ ಕಂಟ್ರಾಕ್ಟರ್ಸ್ ಟೆಂಡರ್ ಹಾಕಿದ್ದರಲ್ಲಿ ಇವರಿಗೆ ಕೊಟ್ಟಿದ್ದಾರೆ ಇದರಲ್ಲಿ ಕಾಂಕ್ರೀಟಿಗೆ ಗಟ್ಟಿ ಕಲ್ಲು ಹಾಕುವ ಷರತ್ತಿದ್ದರೂ ಮೆದುಕಲ್ಲನ್ನು ಹಾಕುತ್ತಾ ಇದ್ದರು. ಇದರಲ್ಲಿ ಕಾಂಕ್ರೀಟ್ ಪ್ರೋರ್ಷನ್‌ಗಿಂತ ಸುರ್ಕಿ ಪ್ರೋರ್ಷನ್ಸ್ ಜಾಸ್ತಿಯಾಗಿದೆ.ಇನ್ನು ಇದರಲ್ಲಿ ಮೆಸನರಿ ಡ್ಯಾಮ್ ಬಗ್ಗೆ ಹೇಳುವುದಾದರೆ ೨೪೧೦ ಆರ್. ಎಲ್. ಲೆವಲ್ ಆದಮೇಲೆ ಸುರ್ಕಿ ಹಾಕಬೇಕು. ಸುರ್ಕಿ ಮೀಲ್ ಪ್ಲಾಂಟ್ ಹಾಕಿದ್ದಾರೆ ಆದರೆ ಸುರ್ಕಿ ತಯಾರು ಮಾಡುವುದು ಇನ್ನೂ ಪ್ರಾರಂಭವಾಗಿಲ್ಲ. ಈ ಹೇಮಾವತಿ ಕಟ್ಟೆಯನ್ನು ೨೪೧೦ ರಿಂದ ೨೪೧೬ರ ತನಕ ೬ ಅಡಿ ಎತ್ತರಿಸಬೇಕೆಂದು ನಿರ್ಧಾರ ಕೈಗೊಂಡಿದ್ದಾರೆ. ಇವರಿಗೆ

೮೨ ರೂಪಾಯಿಸಂತೆ ಕೊಟ್ಟಿದ್ದಾರೆ. ರೆಗ್ಯುಲರ್ ಪಿ. ಡಬ್ಲ್ಯು. ಡಿ. ವಿಡಿಷನ್‌ನಲ್ಲಿ ೫೮-೪೦ ರೂಪಾಯಿಗಳು ಕೊಡಬೇಕಾದಂಥ ಕೆಲಸ. ಅದ್ಯಕ್ಷರೇ ಇದನ್ನು ತಮ್ಮ ಮೂಲಕ ಕೇಳುತ್ತೇನೆ. ಇದು ದೇವೇಗೌಡರ ಪ್ರಭಾವ ಎಂದು ಹೇಳುವುದಿಲ್ಲ. ಇದರಲ್ಲಿ ಯಾವ ಪ್ರಭಾವವೂ ಇಲ್ಲದೆ ಕಂಟ್ರಾಕ್ಟರಿಗೆ ಕೊಡತಕ್ಕ ಹಣ ದಲ್ಲಿ ಭಾಗ ಇಲ್ಲದೆ ಹೇಗೆ ಕೊಟ್ಟರು ? ಇನ್ನು ಇದರ ಜೊತೆಗೆ ಸುರ್ಕಿ ಮಿಲ್ ಪ್ಲಾಂಟ್ ಕೊಟ್ಟಿದ್ದಾರೆ ? ಏತಕ್ಕೆ ಕೊಟ್ಟರು ? ಕಂಟ್ರಾಕ್ಟರುಗಳ ಕ್ಷೇಮಕ್ಕೆ ಅವರ ಅನುಕೂಲಕ್ಕೆ ಈ ಕಟ್ಟೆ ಕಟ್ಟಿಸುತ್ತಾರೆಯೇ?

ಇನ್ನು ಹಾರಂಗಿ ವಿಚಾರದಲ್ಲಿ ಅಪ್ಪಣೆ ಕೊಡಿಸಿದರು. ಟೆಂಡರ್ ಬಂತು. ಆ ಟೆಂಡರ್‌ನ್ನು ತೀರ್ಮಾನ ಮಾಡುವಾಗ ಕೇಳಿದೆ. ಆ ಟೆಂಡರನ್ನು ಎಷ್ಟಕ್ಕೆ ಕರೆದಿದ್ದೀರಿ ಎಂದು, ಈಗ ಅದೇ ಕೆಲಸಕ್ಕೆ ೫೦ ಲಕ್ಷ ರೂಪಾಯಿ ಜಾಸ್ತಿ ಕೊಡುವ ಪರಿಸ್ಥಿತಿ ಬಂದಿದೆ; ಎಂದು ನನಗೆ ಅನಿಸುತ್ತದೆ. ಮೊದಲು ಇವರು ಆ ಕೆಲಸಕ್ಕೆ ಕಂಟ್ರಾಕ್ಟರು ಬರಲಿಲ್ಲ ಎಂದು ಪ್ರಾರಂಭ ಮಾಡಲಿಲ್ಲ. ಏತಕ್ಕೆಂದರೆ ಇವರು ವ್ಯವಹಾರವನ್ನು ಕುದುರಿಸುವುದಕ್ಕೆ, ಇವರಿಗೆ ಪ್ರೋತ್ಸಾಹ ಬರುವ ತನಕ ಕಂಟ್ರಾಕ್ಟರು ಸಿಕ್ಕಲಿಲ್ಲ. ಅಂದರೆ ಅರ್ಥವೇನು? ಇವರ ಪಬ್ಲಿಕ್ ಹಣ ಸ್ಪೆಂಡ್ ಮಾಡುವ ಕಡೆ ಪಬ್ಲಿಕ್ ವೆಲ್‌ಫೇರ್ ಕಡೆ ನೋಡುವುದಿಲ್ಲ. ಇವರು ಕಂಟ್ರಾಕ್ಟರುಗಳ ಅನುಕೂಲಕ್ಕಾಗಿ ಅವರಿಗೆ ಒಳ್ಳೆಯದನ್ನು ಮಾಡುವುದಕ್ಕೆ ಈ ತರಹ ಕೆಲಸಗಳನ್ನು ೬ ತಿಂಗಳು ಕೆಲಸ ನಿಲ್ಲಿಸಿ ಅಮೇಲೆ ಕಂಟ್ರಾಕ್ಟ್ ಕೊಡುವ ಉದ್ದೇಶ,

ಆ ಕಂಟ್ರಾಕ್ಟ್‌ದಾರರು ನಷ್ಟವಾಗುತ್ತದೆ ಲೋರೇಟಿನಲ್ಲಿದ್ದರೆ ನೀವು ಏನಾದರೂ ಮಾಡಿ ಅವನನ್ನು ಉದ್ಧಾರ ಮಾಡಬೇಕು. ಈ ಕಂಟ್ರಾಕ್ಟರ ಕ್ಷೇಮಕ್ಕೆ ಅವನ ಅನುಕೂಲಕ್ಕೆ ಈ ರೀತಿ ಮಾಡುವುದಾದರೆ ಕಂಟ್ರಾಕ್ಟ್ ರಾಜ್ಯವಾಗುತ್ತದೆಯೇ ಹೊರತು ಜನತೆಯ ಒಂದು ವೆಲ್‌ಫೇರ್ ಆಗುವುದಿಲ್ಲ. ಇದರಿಂದ ರಿಪ್ರಪೋರ್ಷನ್, ರೆಪಲವೇಷನ್ ಎಲ್ಲಾ ಹೋಗುತ್ತದೆ. ಇನ್ನು ರಬ್ಬಲ್ ಮೆಸನರಿ ಮಾಡಬೇಕು. ಈ ಮೆಸನರಿ ಆದಮೇಲೆ ಮಣ್ಣು ಹಾಕುತ್ತಾರೆ. ಅನಂತರ ರಫ್ ಮೆಟಲ್ ಹಾಕಬೇಕು. ಫೈನ್ ಮಾಡುವುದಿಲ್ಲ. ಇದರಿಂದ ಆದರ ಮೇಲೆ ಮಣ್ಣು ಹಾಕಿದರೆ ಜಾರುತ್ತದೆ. ಬಾಲಾಜಿ ಕಂಪನಿಯವರು ಕಡಿಮೆ ರೇಟ್ ಹಾಕಿದರು ಎಂದು ಈ ಪಕ್ಕ ಮೆಷಿನರಿಯನ್ನು ಉಪಯೋಗಿಸಲಿಲ್ಲ. ಒಂದು ವೇಳೆ ನಾಳೆ ದಿವಸ ಡ್ಯಾಮ್ ಒಡೆದರೆ ಇದಕ್ಕೆ ಕಾರಣರು ಯಾರು ? ಈಪ್ರೋತ್ಸು ಆದರಲ್ಲಿ ರಾಡ್ಸ್ ಆದರ ಮೇಲೆ ಕಟ್ಟಬೇಕು,

ಒಂದು ಸಾವಿರ ರಾಡುಗಳನು ಹಾಕುತ್ತೇವೆ ಎಂದು ಅಂದಾಜು ಇದ್ದರೆ ನೂರು ಕಬ್ಬಿಣದ ರಾಡುಗಳನ್ನು ಮಾತ್ರ ಉಪಯೋಗಿಸಿದ್ದಾರೆ. ಇಲ್ಲಿ ಸಂಪೂರ್ಣವಾಗಿ ಒಂದು ಸಾವಿರ ಕಬ್ಬಿಣದ ರಾಡುಗಳನ್ನು ಹಾಕಬೇಕಾಗಿತ್ತು. ಇಲ್ಲಿ ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಆಗ ಇಂಜನೀಯರಾಗಿದ್ದ ಶ್ರೀಮಾನ ಪರಮೇಶ್ವರಯ್ಯನವರು ಕೆಲಸವನ್ನು ಮುಂದುವರಿಸಿಕೊಂಡು ಹೋಗಲು ಕ್ಲಿಯರೆನ್ಸ್ ಕೊಡಲಿಲ್ಲ. ಇವರು ಬಹಳ ಚೆನ್ನಾಗಿ ದಕ್ಷರಾಗಿ ಕೆಲಸ ಮಾಡುವವರು ಎಂದು ತಿಳಿದಿದ್ದೇನೆ.

My Hats off to him. He is such an honest and such an efficient man.

ಮಾರ್ಟಾರ್ ಮಿಕ್ಸ್ ಮಾಡುವಾಗ ಹೇಗಿರುತ್ತದೆ ಮತ್ತು ಮೇಸನರಿ ಡ್ಯಾಂನಲ್ಲಿ ಮಾರ್ಟರ್ ಮಿಕ್ಸ್ ಮಾಡುವಾಗ ಹೇಗಿರುತ್ತದೆ ಎಂದರೆ ಇದರ ಬಗ್ಗೆ ಕ್ವಾಲಿಟಿ ಕಂಟ್ರೋಲ್ ಯಾವ ರೀತಿ ಇರಬೇಕೆಂದು ಶ್ರೀ ಪರಮೇಶ್ವರಯ್ಯನವರು ಮೂರು ಕಾಗದಗಳನ್ನು ಬರೆದಿದ್ದಾರೆಂದು ಕೇಳಿದ್ದೇನೆ. ಆದರ ಇದರ ಬಗ್ಗೆ ಮೇಲಿರುವ ಚೀಫ್ ಇಂಜನೀಯರ್‌ರವರು ಇದರ ಬಗ್ಗೆ ಸರಿ ತಪ್ಪು ಎಂದು ಯಾವುದನ್ನೂ ಹೇಳಲಿಲ್ಲ. ಮೇಸನರಿ ಡ್ಯಾಂನ್ನು ಮಾಡುವಾಗ ಶೇಕಡಾ ೪೮ ರಷ್ಟು ಮಾರ್ಟರು ಮಿಕ್ಸ್ ಮಾಡುತ್ತಾರೆ. ಇಟ್ಟಿಗೆ ಮಿಕ್ಸ್ ಮಾಡುವಾಗ ಹೇಗಿರುತ್ತದೆ ಎಂದರೆ ಶೇಕಡಾ ೩೫ ರಷ್ಟು ಇರುತ್ತದೆ. ಇದೇ ಸ್ಟೋನ್ ಮಾರ್ಟರು ಮಾಡುವಾಗ ಶೇಕಡಾ ೫೮ ರಷ್ಟು ಇರುತ್ತದೆ. ಇದಕ್ಕೆಲ್ಲಾ ರಿಕಾರ್ಡುಗಳು ಇರುತ್ತವೆ. ಈಗ ಇರುವ ರಿಕಾರ್ಡುಗಳಲ್ಲಿ ಶೇಕಡಾ ೩೨ ರಷ್ಟು ಮಾರ್ಟರನ್ನು ಮಿಕ್ಸ್ ಮಾಡಿದ್ದಾರೆಂದು ಗೊತ್ತಾಗುತ್ತದೆ. ಆದರೆ ಇದರಲ್ಲಿ ಶೇಕಡಾ ೪೨ ರಷ್ಟು ಮಾರ್ಟರು ಹಾಕಿದೆ ಎಂದು ಬಿಲ್ ಮಾಡಿ ಹಣ ತೆಗೆದುಕೊಂಡು ಕಂಟ್ರಾಕ್ಟರು ಹೋದ ಮೇಲೆ ಇಲ್ಲಿ ಕಟ್ಟಿರುವ ಕಟ್ಟೆ ಒಡೆದು ಹೋದರೆ ನಾಳೆ ಜವಾಬ್ದಾರಿಯನ್ನು ಯಾರು ಹೊರುತ್ತಾರೆ ? ಇವೊತ್ತು ನಾವು ಹೇಮಾವತಿ ಕಟ್ಟೆ ಕಟ್ಟುತ್ತಿರುವುದು ಒಬ್ಬರ ಅನುಕೂಲಕ್ಕಾಗಿ ಕಟ್ಟುತ್ತಿದ್ದೇವೋ ಇಲ್ಲವೆ ರಾಜ್ಯದ ಎಲ್ಲಾ ಜನಗಳಿಗೆ ಉಪಕಾರವಾಗಲಿ ಎಂದು ಕಟ್ಟುತ್ತಿದ್ದೇವೋ ? ಇದರ ಮೇಲೆ ಸರಿಯಾಗಿ ನಿಗ ತೆಗೆದುಕೊಳ್ಳದೇ ಹೋದರೆ ಚೀಫ್ ಇಂಜನೀಯರ ಮೇಲೆ ಏತಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬಾರದು ? ಆದರೆ ಕಂಟ್ರಾಕ್ಟರಿಗೆ ಅನುಕೂಲ ಮಾಡಬೇಕು ಮತ್ತು ಇಲ್ಲಿರುವ ಸೂಪರಿಂಟೆಂಡಿಂಗ್ ಇಂಜನೀಯರು ಇವಕ್ಕೆ ಅವಕಾಶ ಕೊಡುವುದಿಲ್ಲ ಎಂದು ಇವರನ್ನು ಇಲ್ಲಿಂದ ವರ್ಗಾಯಿಸಲು ಪ್ರಯತ್ನ ಮಾಡಿದರು. ಹೀಗೆ ಇಲ್ಲಿದ್ದ ಅಸಿಸ್ಟೆಂಟು ಇಂಜನೀಯರು, ಎಕ್ಸಿಕ್ಯೂಟೀವ್ ಇಂಜನೀಯರು ಹಾಗೂ ಸೂಪರಿಂಟೆಂಡಿಂಗ್ ಇಂಜನಿಯರ್‌ರವರನ್ನು ಶ್ರೀಮಾನ್ ದೇವೇಗೌಡರು ಹೇಳಿದರು

(ಶ್ರೀ ಎಚ್. ಎನ್. ಸಂಜೇಗೌಡ)

ಎಂದು ಬೇರೆ ಕಡೆಗೆ ವರ್ಗ ಮಾಡಿದರು. ಇದರಿಂದ ಸರ್ಕಾರಕ್ಕೆ ಬೇಕಾದಷ್ಟು ದುಡ್ಡು ಟಿ. ಎ. ಮತ್ತು ಡಿ. ಎ. ಗಳಿಗೆ ಖರ್ಚಾಯಿತು. ಒಂದು ಕಡೆ ಒಳ್ಳೆಯ ಕೆಲಸ ಮಾಡುವ ಒಳ್ಳೆ ದಕ್ಷರಾದ ಅಧಿಕಾರಿಗಳು ಇದ್ದು ಅವರು ಮಾಡಿದ ಕೆಲಸಗಳಿಗೆ ಮನ್ನಣೆ ಕೊಡದೇ ಹೋದರೆ ಆದಕ್ಕೇನು ಬೆಲೆ ಬರುತ್ತದೆ ? ಸರ್ಕಾರಕ್ಕೆ ವರದಿ ಬಂದು ಒಬ್ಬರಿಗೊಬ್ಬರಿಗೆ ಭಿನ್ನಾಭಿಪ್ರಾಯಗಳು ಬಂದಾಗ ಅವರನ್ನು ಸರಿಯಾಗಿ ಚರ್ಚೆ ಮಾಡಿ ಸರಿಮಾಡಬೇಡವೇ ? ಇದನ್ನು ಬಿಟ್ಟು ನಮ್ಮ ರಾಜ್ಯದಲ್ಲಿ ಯೋಜನೆಗಳನ್ನು ಮತ್ತು ಕಟ್ಟಿಗಳನ್ನು ಕಟ್ಟಿ ಜಾಗ್ರತೆ ಒಡೆಯುವುದಕ್ಕಾಗಿ ಕಟ್ಟುತ್ತಿದ್ದೇವೆಯೇ ? ಇದನ್ನು ಸರ್ಕಾರ ಗಮನಿಸಬೇಡವೇ ?

ಗೊರೂರು ಡ್ಯಾಂನಲ್ಲಿ ಯಾವ ರೀತಿ ಮಾಡಿದ್ದಾರೆ ಎನ್ನುವುದನ್ನು ಬೇಕಾದರೆ ಪರಿಶೀಲಿಸಬಹುದು. ಇಲ್ಲಿ ಒಂದು ಮೈಲಿ ದೂರದಲ್ಲಿ ಕ್ವಾರಿ ಇದೇ, ಇದನ್ನು ಯಾರು ಬೇಕಾದರೂ ನೋಡಬಹುದು. ಈ ಸಿಲ್ಲೀ ಕ್ವಾರಿಯಿಂದ ತಂದ ಕಲ್ಲನ್ನು ಉಪಯೋಗಿಸಿ ಡ್ಯಾಂ ಕಟ್ಟುತ್ತಿದ್ದಾರೆ. ಇದನ್ನು ಸರಿಯಾಗಿ ಚೆಕ್ ಮಾಡುವುದು ಸೂಪರಿಂಟೆಂಡಿಂಗ್ ಇಂಜನೀಯರವರ ಕೆಲಸವಲ್ಲವೇ ? ಇಲ್ಲಿರುವ ಅಧಿಕಾರಿಗಳು ಇದನ್ನು ಟಾರೇಟು ಮಾಡಲಿಲ್ಲ ಎಂದು ಇವರನ್ನು ಏನಾದರೂ ಮಾಡಿ ಟ್ರಾನ್ಸ್‌ಫರು ಮಾಡಿಸಬೇಕು ಎಂದು ಮುಖ್ಯ ಮಂತ್ರಿಗಳು ಡೆಲ್ಲಿಗೆ ಏರೋಪ್ಲೇನಿನಲ್ಲಿ ಹೋಗುವ ಅವಸರದಲ್ಲಿದ್ದಾಗ ವರ್ಗಕ್ಕೆ ಆರ್ಡರು ಮಾಡಿಸಿದರು ಎನ್ನುವುದು ನಮಗೆ ಗೊತ್ತಾಗಿದೆ. ಇದಾದ ಮೂರು ತಿಂಗಳಲ್ಲಿ ಸುಮಾರು ಹತ್ತು ಲಕ್ಷ ಹಣದ ಹೆಚ್ಚು ಕೊಟ್ಟು ಇನ್ನೊಬ್ಬರು ಕಂಟ್ರಾಕ್ಟರನ್ನು ಗೊತ್ತು ಮಾಡಿದರು. ಹೀಗೆ ಮಾಡಿಕೊಂಡು ಹೋದರೆ ಸರ್ಕಾರ ಇರುವುದು ಬರೀ ಕಂಟ್ರಾಕ್ಟ್‌ದಾರರಿಗೇ ಹೊರತು ಬೇರೆ ಯಾರಿಗೂ ಇಲ್ಲ ಎಂದು ಕಾಣುತ್ತದೆ. ಇಲ್ಲಿನ ರೈತಾಪಿ ಜನರಿಗೆ ಈ ಸರ್ಕಾರದಿಂದ ಏನು ಅನುಕೂಲವಾಗುವುದಿಲ್ಲ ಎನ್ನುವುದು ಕಂಡು ಬರುತ್ತಿದೆ. ನಾವೆಲ್ಲಾ ಸದಸ್ಯರಾಗಿ ಬಂದಿರುವುದು ರೈತರ ಹಿತಕ್ಕಾಗಿ ಎಂದು ಹೇಳಬೇಕಾಗಿದೆ.

ಇನ್ನೂ ಒಂದು ಪಾಯಿಂಟು ಇಲ್ಲಿ ಹೇಳಬೇಕಾಗಿದೆ. ಅದು ಇಂಟರ್ ಸ್ಟೇಟ್ ಸೀನಿಯಾರಿಟಿ ಬಗ್ಗೆ. ಇಂತಹ ಒಂದು ಪಟ್ಟಿ ಮಾಡಿರುವುದರಿಂದ ಇಲ್ಲಿರುವ ಅಧಿಕಾರಗಳಲ್ಲಿ ಬಹಳ ಅಸಂತುಷ್ಟಿಗೆ ಕಾರಣವಾಗಿದೆ. ಸರ್ಕಾರದವರು ಇಂಟರ್ ಸ್ಟೇಟ್ ಸೀನಿಯಾರಿಟಿ ಪಟ್ಟಿ ಎಂದು ತಾ॥ ೨೩-೭-೧೯೬೧ರಲ್ಲಿ ಒಂದು ಪಟ್ಟಿ, ೨೩-೧-೧೯೬೪ರಲ್ಲಿ ಒಂದು ಪಟ್ಟಿ, ೧೮-೮-೧೯೬೬ರಲ್ಲಿ ಒಂದು ಪಟ್ಟಿ ೩೦-೧೨-೧೯೬೯ರಲ್ಲಿ ಒಂದು ಪಟ್ಟಿ ಮತ್ತು ೩-೭-೧೯೬೯ರಲ್ಲಿ ಒಂದು ಪಟ್ಟಿ ಹೀಗೆ ಹೊರಡಿಸಿದ್ದಾರೆ. ಇಪ್ಪೊತ್ತು ಅದನ್ನು ನೋಡಿದರೆ ಹಳೆಯ ಮೈಸೂರಿನಲ್ಲಿ ಇದ್ದು ಅಸಿಸ್ಟೆಂಟು ಇಂಜನೀಯರು ಆದವರು ಇನ್ನೂ ಅಸಿಸ್ಟೆಂಟು ಇಂಜನೀಯರಾಗಿಯೇ ಕೊಳೆಯುತ್ತಿದ್ದಾರೆ. ಆದರೆ ಬೇರೆ ಕಡೆಯಿಂದ ಬಂದ ಎಷ್ಟೋ ಜನ ಡಿಪ್ಲೊಮಾ ಪಡೆದವರು, ಜೂನಿಯರು ಇಂಜನೀಯರಾಗಿದ್ದವರು ಇಂದು ಅಸಿಸ್ಟೆಂಟು ಇಂಜನೀಯರು, ಎಕ್ಸಿಕ್ಯೂಟೀವ್ ಇಂಜನೀಯರಾಗಿ ಮತ್ತು ಸೂಪರಿಂಟೆಂಡಿಂಗ್ ಇಂಜನೀಯರುಗಳಾಗಿದ್ದಾರೆ. ಕೆಲವರು ಹಳೇ ಮೈಸೂರಿನಲ್ಲಿ ಹುಟ್ಟಿದ್ದೇ ತಪ್ಪು ಎನ್ನುತ್ತಿದ್ದಾರೆ. ಇವರುಗಳು ಜೂನಿಯರು ಇಂಜನೀಯರಾಗಿ ೧೮ ವರ್ಷಗಳಾಗಿದ್ದರೂ ಇನ್ನೂ ಜೂನಿಯರು ಇಂಜನೀಯರುಗಳಾಗಿಯೇ ಇದ್ದಾರೆ.

This Mysore State, even when it was a Princely State. it was very well-known for its engineers.

ಅದೇನು ದುರಾದೃಷ್ಟವೋ ಏನೋ ಶ್ರೀ ಕಡಿದಾಳ ಮಂಜಪ್ಪನವರು ಇದ್ದ ಕಾಲದಲ್ಲಿ ಒಬ್ಬರೇ ಒಬ್ಬರು ಚೀಫ್ ಇಂಜನೀಯರ್ ಆಗಿದ್ದರು. ೧೯೫೬ ರಿಂದೀಚೆಗೆ ಅಂದರೆ ರಾಜ್ಯ ಪುನರ್ವಿಂಗಡಣೆಯಾದ ಮೇಲೆ ಯಾವ ಪ್ರಮೋಷನ್‌ಗಳೂ ಆಗಿಲ್ಲ. ಈಗ ಯಾವ ಯಾವ ಮನವಿಗಳು ಬಂದಿವೆ ಅವುಗಳ ಬಗ್ಗೆ ಸರಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ಇದರಲ್ಲಿ ಬಹಳ ಜನಕ್ಕೆ ಭಾರಿ ಅನ್ಯಾಯವಾಗುತ್ತದೆ.

ಕೊನೆಯದಾಗಿ ನಾನು ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಲಕ್ಕಪ್ಪನವರ ಬಗ್ಗೆ ಹೆಚ್ಚು ಟೀಕೆ ಟಿಪ್ಪಣಿ ಮಾಡಬಾರದು ಎಂದು ಇದ್ದೆ. ಆದರೆ ಯಾವುದೋ ಲೈಸನ್ಸ್ ಕೊಡುವ ವಿಷಯದಲ್ಲಿ ಅಕ್ರಮಗಳು ನಡೆದಿವೆ. ಅದೇನು ಎನ್ನುವುದನ್ನು ಇಲ್ಲಿ ಕೇಳುವುದಿಲ್ಲ. ಅವರಿಗೆ ಅದು ಪೂರ್ತಿ ಗೊತ್ತಿರುವ ವಿಚಾರ. ಇದರ ಬಗ್ಗೆ ಅವರೇ ನೋಟು ಕೂಡ ಬರೆದಿದ್ದಾರೆ. ನಾನು ಇದನ್ನು ಇಲ್ಲಿ ಹೇಳಿ ಅವರ ತೇಜೋವಧೆ ಮಾಡಲು ಹೋಗುವುದಿಲ್ಲ. ಸುಮ್ಮನೆ ಕೆಲವು ಕಾಗದಗಳ ನಂಬರುಗಳನ್ನು ಹೇಳುತ್ತೇನೆ. ಅವರೇ ಗುರುತು ಮಾಡಿಕೊಂಡು ವಿಚಾರ ಮಾಡಲಿ. ಅವು ಯಾವುವು ಎಂದರೆ :

Letter No.	1 CDR	PPJ	68-69	Dated	28-2-1970
	PWD	151	CSR 69		9-1-1970
	CDR				26-12-1969

I want him to function as a Minister. He must function under the Rule of Law. He must respect the rules. He must respect certain standards.

ಈ ಬಗ್ಗೆ ವಿಷಯಗಳನ್ನು ನಾನು ಇಲ್ಲಿ ಹೊರಗೆಡವಿ ಅವರ ತೇಜೋವಧೆ ಮಾಡಲು ಇಷ್ಟ ಪಡುವುದಿಲ್ಲ. ಇದರಲ್ಲಿ ಯಾರ್ಯಾರ ಕೈವಾಡ ಇದೆ ಎನ್ನುವುದು ನಮಗೆ ಗೊತ್ತಾಗಿದೆ. ನಿಯಮಕ್ಕೆ ವಿರೋಧವಾಗಿ ನಡೆದವರು ಯಾರೇ ಆಗಲೀ, ಅವರನ್ನು ರಕ್ಷಿಸುವುದು ಅಕ್ಷಮ್ಯ ಅಪರಾಧ. ಇಂತಹ ವಿಚಾರದಲ್ಲಿ ಇವರ ಮುಖ ಭಂಗ ಮಾಡಲು ಹೋಗದೆ ನಾನು ಇಲ್ಲಿ ಬರೇ ಗೆಜೆಡ್ ನೋಟಿಫಿಕೇಷನ್ ನನ್ನ ದೃಷ್ಟಿಗೆ ಬಂದಿರುವುದನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಗೆಜೆಟ್‌ನಲ್ಲಿ ಎಲ್ಲ ಆರ್ಡರ್‌ಗಳೂ ಕೂಡ ರಾಜ್ಯಪಾಲ ಹೆಸರಿನಲ್ಲಿಯೇ ಪ್ರಿಂಟ್ ಆಗುತ್ತದೆ. ಆದರೂ ಕೂಡನನ್ನ ಗಮನಕ್ಕೆ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಇರುವ ಕೆಲವು ಆರ್ಡರ್‌ಗಳು ಬರುತ್ತಿರುವುದು ದುರದೃಷ್ಟಕರ. ನಾನು ಮಾನ್ಯ ಲಕ್ಕಪ್ಪನವರಿಗೆ ಮುಗುಂ ಆಗಿ ಹೇಳಿದ್ದೇನೆ. ಅವರು ಎಚ್ಚರಿಕೆಯಿಂದ ಇರುವುದು ಒಳ್ಳೆಯದು. ಅವರು ಅಪದ್ದಕ್ಕೆ ಒಳಗಾಗಬಾರದು ಎಂದು ಈ ಸಭೆಯ ಮೂಲಕ ಸೂಚ್ಯವಾಗಿ ತಿಳಿಸುತ್ತೇನೆ. ಕೋಣನೂರಿನಲ್ಲಿ ಒಂದು ರಸ್ತೆಯನ್ನು ೪ ಫರ್ಲಾಂಗ್‌ವರೆಗೆ ಡೀವಿಯೇಟ್ ಮಾಡಿಸಿಕೊಡಬೇಕೆಂದು ನಾನು ಕಾಗದ ಬರೆದಿದ್ದಕ್ಕೆ it is under examination ಎಂಬುದಾಗಿ ನನಗೆ ತಾರೀಖು ೬-೨-೧೯೬೯ ರಲ್ಲಿ ಉತ್ತರ ಬಂತು. ಇದುವರೆಗೆ ಆ ಕಾರ್ಯವನ್ನು ತೆಗೆದುಕೊಂಡಿಲ್ಲ. ಆ ಕೆಲಸಕ್ಕೆ ಬೇಕಾದ ಜಮೀನನ್ನು ಬಿಟ್ಟು ಕೊಡುವುದಕ್ಕೆ ಸಿದ್ದರಿದ್ದೇವೆ. ಆದರೂ ಕೂಡ ಆ ಬಗ್ಗೆ ಇನ್ನೂ ಮಂಜೂರಾತಿ ಕೊಟ್ಟಿಲ್ಲ. ಒಂದು ವರ್ಷವಾದರೂ ಕೂಡ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಬೇಕಾದರೆ ಶ್ರೀಮಾನ್ ಲಕ್ಕಪ್ಪನವರು ನನಗೆ ಹೇಳಿಬಿಡಲಿ, ನನಗೂ ನಿಮಗೂ ಆಗುವುದಿಲ್ಲ, ನನಗೆ ಕಾಗದ ಬರೆಯಬೇಡಿ ಎಂಬುದಾಗಿ. ನಂತರ ಅದನ್ನು ನಾನು ನನ್ನ 'ಓಟರ್ಸ್'ಗೆ ಮಾನ್ಯ ಲಕ್ಕಪ್ಪನವರು ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿರುವವರೆಗೆ ನನ್ನ ಕ್ಷೇತ್ರದಲ್ಲಿ ಒಂದು ಕೆಲಸವೂ ಸಹ ಆಗುವುದಿಲ್ಲ ಎಂಬುದಾಗಿ ಹೇಳಿಬಿಡುತ್ತೇನೆ. ನನ್ನ ಕ್ಷೇತ್ರದ ಬಗ್ಗೆ ಮಾನ್ಯ ಲಕ್ಕಪ್ಪನವರು ಇದೇ ಪ್ರವೃತ್ತಿಯನ್ನು ಮುಂದುವರಿಸಿದರೆ ಅವರ ಸ್ಥಾನಮಾನಕ್ಕೆ ಗೌರವ ತರುವುದಿಲ್ಲ ಎಂಬ ಮಾತನ್ನು ಹೇಳುತ್ತೇನೆ. ಮಾನ್ಯ ವೀರೇಂದ್ರ ಪಾಟೀಲರು ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಯೋಜನೆಗಳನ್ನು ಏನೇ ತೊಂದರೆ ಬಂದರೂ ಕೂಡ ನಿಲ್ಲಿಸದೆ ಕಾರ್ಯಗತ ಮಾಡುತ್ತೇವೆನ್ನುವ ವೀರಸಂಕಲ್ಪವನ್ನು ನೆನ್ನೆ ದಿವಸ ಮಾಡಿದರು. ಆದರೆ ಹಾರಂಗಿ ಯೋಜನೆಗೆ ಈ ಸಾಲಿನಲ್ಲಿ ೧೦ ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಯಾವಾಗಲೂ ನುಡಿದಂತೆ ನಡೆಯುವುದು ಒಳ್ಳೆಯದು. ರೀಜನೆಲ್ ಇಂಬ್ಯಾಲೆನ್ಸ್‌ಸ್ ಬಗ್ಗೆ ಒಂದು ಪುಸ್ತಕವನ್ನು ಪ್ರಿಂಟ್ ಮಾಡಿಸಿ ಹಳೆಯ ಮೈಸೂರಿಗೆ ಅನ್ಯಾಯವಾಗಿಲ್ಲ ಎಂದು ಹೇಳಿದ್ದಾರೆ. ಪಬ್ಲಿಸಿಟಿಗೋಸ್ಕರ ಆ ರೀತಿ ಪ್ರಿಂಟ್ ಮಾಡಿಸಿದ್ದಾರೆಂದು ಕಾಣುತ್ತದೆ. ಇಂತಹ ಕೆಲಸಗಳಲ್ಲಿ ಅವರು ಶೂರರು. ಈ ವಿಚಾರದಲ್ಲಿ ಮುಂದೆ ಸಮಯ ಬಂದಾಗ ಹೇಳುತ್ತೇನೆ. ಶ್ರೀಮಾನ್ ವೀರೇಂದ್ರಪಾಟೀಲರು ನುಡಿದಂತೆ ನಡೆಯುತ್ತಿಲ್ಲ ಎಂಬುದೇ ನನ್ನ ಆಕ್ಷೇಪಣೆ. ಹಾರಂಗಿ ಯೋಜನೆಗೆ ಕೇವಲ ೧೦ ಲಕ್ಷ ರೂಪಾಯಿಗಳನ್ನು ಒದಗಿಸಿರುವುದಕ್ಕೆ ಕಾರಣ ಏನು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಇಲಾಖೆಯಿಂದಲೇ ಕೆಲಸ ಮಾಡಿಸಿದರೂ ಸರಿಯೆ, ಅಂತೂ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಯೋಜನೆಗಳ ಕೆಲಸ ಜಾಗ್ರತೆಯಾಗಬೇಕು. ಏಕೆಂದರೆ ೧೯೭೪ ರೊಳಗೆ ನಮ್ಮ ಹಕ್ಕನ್ನು ರಕ್ಷಣೆ ಮಾಡಿಕೊಳ್ಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಗೃಹ ಖಾತೆಯನ್ನು ಸಹ ಹೊಂದಿರುವುದರಿಂದ ಅವರಿಗೆ ನೀರಾವರಿ ಯೋಜನೆಗಳ ಬಗ್ಗೆ ಗಮನ ಕೊಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಒಟ್ಟು ನೀರಾವರಿ ಯೋಜನೆಗಳ ಬಗ್ಗೆ ಅವರಿಗೆ ಚಿಂತೆ ಕಡಿಮೆಯಾಗಿದೆ. ನಮ್ಮ ರಾಜ್ಯದಲ್ಲಿ ನೀರಾವರಿ ಯೋಜನೆಗಳದ್ದೇ ಬೃಹತ್ ಸಮಸ್ಯೆಯಾಗಿದೆ. ಆದ್ದರಿಂದ ಇದು ಒಂದು ಖಾತೆಯನ್ನು ಮಾತ್ರ ಮುಖ್ಯಮಂತ್ರಿಗಳು ಇಟ್ಟುಕೊಂಡು ಉಳಿದ ಖಾತೆಗಳನ್ನು ಬೇರೆಯವರಿಗೆ ವಹಿಸಬೇಕು ಎಂದು ಸಲಹೆ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ) :—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ನಂಜೇಗೌಡರ ನಂತರ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ನಾನು ನಿಮಗೆ ವಂದಿಸುತ್ತೇನೆ. ಮಾನ್ಯ ನಂಜೇಗೌಡರು ಮಾತನಾಡುವಾಗ ನನ್ನನ್ನು, ಕೆಲವು ಹಿರಿಯ ಸದಸ್ಯರನ್ನು ಮತ್ತು ಮಂತ್ರಿಮಂಡಲವನ್ನು ಸೇರಿಸಿ ಮಾತನಾಡಿದ್ದಾರೆ.

ಶ್ರೀ ಹೆಚ್. ಎನ್. ನಂಜೇಗೌಡ :—ತಾವು ಮಂತ್ರಿಗಳಾಗುತ್ತೀರಾ?

ಶ್ರೀ ಹೆಚ್. ಡಿ. ದೇವೇಗೌಡ .—ಸಂತೋಷ. ಮಾನ್ಯ ನಂಜೇಗೌಡರು ಭಾಷಣ ಮುಗಿಸುವುದಕ್ಕೆ ಮುಂಚೆ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ನೀರನ್ನು ಉಪಯೋಗ ಮಾಡಿಕೊಳ್ಳುವುದರ ಬಗ್ಗೆ ಏನೇನು ಕಾರ್ಯಕ್ರಮ ಕೈಕೊಳ್ಳಬೇಕು ಎಂಬುದರ ಬಗ್ಗೆ ಮುಖ್ಯಮಂತ್ರಿಗಳ ಗಮನ ಸೆಳೆದು ಕೆಲವು ಸಲಹೆಗಳನ್ನು ಕೊಟ್ಟರು. ಅದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಹೇಮಾವತಿ ಯೋಜನೆಯ ಬಗ್ಗೆ ನನಗೆ ಮಾತನಾಡುವುದಕ್ಕೆ ಇಷ್ಟವಿರಲಿಲ್ಲ. ಆದರೆ ಮಾನ್ಯ ನಂಜೇಗೌಡರು ಆ ಯೋಜನೆಯ ಬಗ್ಗೆ ಏನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಮತ್ತು ಪರೋಕ್ಷವಾಗಿ ನನ್ನ ಮೇಲೆ ಏನು ಒಂದು ಆರೋಪಣೆ ಹೊರಿಸುವ ರೀತಿಯಲ್ಲಿ ಮಾತನಾಡಿದ್ದಾರೆ, ಆ ಒಂದು ಆರೋಪಣೆಯ ಬಗ್ಗೆ ಮಾತನಾಡಬೇಕಾಗಿದೆ. ಬಾಲಾಜಿ ಕನ್‌ಸ್ಟ್ರಕ್ಷನ್ ಕಂಪನಿಯವರ ಅನುಕೂಲಕ್ಕಾಗಿ ಸರ್ಕಾರದವರು ಅಲ್ಲಿದ್ದ ಅಧಿಕಾರಿಗಳನ್ನೇ ವರ್ಗ ಮಾಡಲು ನಾವು ಕೆಲವರು ಮುಖ್ಯಮಂತ್ರಿಗಳಿಗೆ ಹೇಳಿದ್ದೇವೆ ಎಂದು ಸಹ ಮಾನ್ಯ ಸದಸ್ಯರು ಹೇಳಿದರು. ಬಹುಶಃ ಅಧಿಕಾರಿಗಳ ವರ್ಗವಾಗಿರುವುದು ನಿಜ. ಮತ್ತು ವರ್ಗ ಮಾಡುವುದಕ್ಕೆ ನಾವು ಹೇಳಿರುವುದೂ ನಿಜ. ಆ ವಿಷಯದ ಬಗ್ಗೆ ನಾನು ಅಂಜುಬುರುಕುತನ ತೋರಿಸುತ್ತಿಲ್ಲ. ಇಲ್ಲಿ ಪ್ರಾಮಾಣಿಕತೆಯ ಪ್ರಶ್ನೆ ಬರುತ್ತದೆ, ಕಳೆದ ೮ ವರ್ಷಗಳಿಂದ ನಾನು ಇಲ್ಲಿ ಸದಸ್ಯನಾಗಿದ್ದೇನೆ. ಮತ್ತು ಈ ಸಭೆಯ ನಡೆವಳಿಕೆಗಳನ್ನು ನೋಡುತ್ತಿದ್ದೇನೆ. ನನಗೆ ಇರತಕ್ಕಂಥ ಅನುಭವದಲ್ಲಿ ಹೇಳುವುದಾದರೆ ಪಕ್ಕದ ನೆರೆ ರಾಜ್ಯಗಳಾದ ಮದ್ರಾಸ್, ಆಂಧ್ರ ಮತ್ತು ಮಹಾರಾಷ್ಟ್ರ ಶಾಸನ ಸಭೆಯಲ್ಲಿ ನಡೆಯುತ್ತಿರುವ ನಡೆವಳಿಕೆಗಳನ್ನು ಸಹ ನೋಡುವುದಾದರೆ ಅಲ್ಲಿ ಲೋಕೋಪಯೋಗಿ ಇಲಾಖೆಯ ಮೇಲೆ ಆಪಾದನೆಗಳನ್ನು ಮಾಡುವಂತಹ ಸನ್ನಿವೇಶವನ್ನು ನಾನು ನೋಡಿಲ್ಲ. ನಮ್ಮ ರಾಜ್ಯದಲ್ಲಿ ಇದೊಂದು ವ್ಯಾಧಿಯಾಗಿದೆ ದುಡ್ಡು ಹೊಡೆಯುವುದರಲ್ಲಿ ಲೋಕೋಪಯೋಗಿ ಇಲಾಖೆ ಇತರೇ ಇಲಾಖೆಗಿಂತ ಅಗ್ರಸ್ಥಾನ ಪಡೆದಿದೆ ಎಂದು ಹೇಳುತ್ತಾರೆ. ಈ ರೀತಿಯ ಒಂದು ಆಪಾದನೆಯನ್ನು ಆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ಮೇಲೆ ಹೊರಿಸುವುದಾದರೆ ಅವರಿಗೆ ಸಾಕಷ್ಟು ಜಿಗುಪ್ಸೆ ಬರುತ್ತದೆ. ಹೇಮಾವತಿ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿ ಪ್ರಾಮಾಣಿಕರಾಗಿದ ರೂ ಕೂಡ ವರ್ಗ ಮಾಡಿಸಿದರು ಎಂದು ನನ್ನ ಮೇಲೆ ಮಾನ್ಯ ಸದಸ್ಯರು ಹೇಳಿದರು. ಅವರು ಉತ್ಪ್ರೇಕ್ಷೆಯಿಂದ ಮಾತನಾಡಿದರೆಂದು ಕಾಣುತ್ತದೆ. ಇದೇ ಅಧಿಕಾರಿಗಳು ನನ್ನ ಊರಿನಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿದ್ದರು ನೂರಕ್ಕೆ ನೂರು ಪಟ್ಟು ಸತ್ಯವಂತರಾಗಿದ್ದರು. ಹೇಮಾವತಿ ಯೋಜನೆ ಬಗ್ಗೆ ವರ್ಷಕ್ಕೆ ೧೩–೧೪ ಲಕ್ಷ ರೂಪಾಯಿಗಳಷ್ಟು ಕೆಲಸದ ಪ್ರೊಗ್ರೆಸ್ ಆಗುತ್ತಿದ್ದರೂ ಕೂಡ ಇವರ ಕಾಲದಲ್ಲಿ ೮ ಒಂದು ಪ್ರೊಗ್ರೆಸ್ ಎರಡು–ಎರಡೂವರೆ ಲಕ್ಷಕ್ಕೆ ಇಳಿಯಿತು. ೧೯೭೪ ರೊಳಗೆ ಈ ಯೋಜನೆಯನ್ನು ಮುಗಿಸಬೇಕೆಂದಿರುವಾಗ ಈ ರೀತಿ ಪ್ರೊಗ್ರೆಸ್ ತೋರಿಸಿದರೆ ಯಾವ ಕಾಲಕ್ಕೆ ಈ ಯೋಜನೆ ಮುಗಿಯುವುದು. ಇದೆ ಆಧಾರದ ಮೇಲೆ ನಾನು ಶ್ರೀಮಾನ್ ಶಿವಪ್ಪನವರು, ಶ್ರೀಮಾನ್ ಚ್ಯಾವಲನಯ್ಯನವರು ಮತ್ತು ಶ್ರೀಮಾನ್ ಬೊಮ್ಮೇಗೌಡರು ಮುಖ್ಯಮಂತ್ರಿಗಳ ಹತ್ತಿರ ಹೋಗಿ ಆ ಅಧಿಕಾರಿಯನ್ನು ವರ್ಗ ಮಾಡುವುದಕ್ಕೆ ಹೇಳಿದೆವು. ಇವತ್ತು ಮೈಸೂರು ರಾಜ್ಯದಲ್ಲಿ ಸುಮಾರು ೨೦–೨೨ ವೇಜರ್ ಇರಿಗೇಷನ್ ಪ್ರಾಜೆಟ್‌ಗಳ ಕೆಲಸ ನಡೆಯುತ್ತಿದೆ, ಎಲ್ಲ ಕಡೆ ಇರುವ ಸೂಪರಿಂಟಿಂಡಿಂಗ್ ಇಂಜಿನಿಯರ್‌ಗಳು ಲಂಚ ಹೊಡೆಯಂತಿಹ್ಹಾರೆ ಎಂದು ಹೇಳುವುದು ಸರಿಯಲ್ಲ. ನಾಳೆ ಕಟ್ಟೆ ಒಡೆದುಹೋದರೆ ಸರ್ವರೂ ಜವಾಬ್ದಾರರಾಗಬೇಕಾಗುತ್ತದೆ.

ಶ್ರೀ ಹೆಚ್. ಎನ್. ನಂಜೇಗೌಡ :—ಶ್ರೀ ಹೈದರಾಲಿ ಎಂಬುವವರನ್ನು ಮೂರು ತಿಂಗಳೊಳಗೆ ವರ್ಗ ಮಾಡಿದ್ದು ಏತಕ್ಕೆ, ಶ್ರೀ ಗುಲಾಮ್ ಮಹಮದ್ ಎಂಬುವವರನ್ನು ೫ ತಿಂಗಳೊಳಗೆ ವರ್ಗ ಮಾಡಿದ್ದು ಏತಕ್ಕೆ ?

ಶ್ರೀ ಹೆಚ್. ಡಿ. ದೇವೇಗೌಡ :—ಏಕೆ ಎಂದರೆ ಅಧಿಕಾರಿಗಳ ಪ್ರಾಮಾಣಿಕತೆ ಒಂದೇ ದೊಡ್ಡಸ್ತಿಕೆ ಅಲ್ಲ. ಅದರ ಜೊತೆಗೆ ಕಾರ್ಯದಕ್ಷತೆ ಮತ್ತು ಕಾರ್ಯ ವಿಚಕ್ಷಣೆಯೂ ಸಹ ಬೇಕಾಗುತ್ತದೆ. ಕಂಟ್ರಾಕ್ಟರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಅಧಿಕಾರಿಗಳು ನಡೆದುಕೊಳ್ಳದಿದ್ದರಿಂದ ಮತ್ತು ಎಲೆಕ್ಷನ್ ಸಮಯದಲ್ಲಿ ಕಂಟ್ರಾಕ್ಟರಿಂದ ಪಣ ತೆಗೆದುಕೊಳ್ಳುವುದಕ್ಕೋಸ್ಕರ ಅಧಿಕಾರಗಳನ್ನು ವರ್ಗ ಮಾಡಿಸಿದರು ಮತ್ತು ಕೆಲಸದ ಅಂದಾಜನ್ನೇ ಕಂಟ್ರಾಕ್ಟರ ಅನುಕೂಲಕ್ಕೋಸ್ಕರ ಬದಲಾವಣೆ ಮಾಡಿಸಿದರು ಎಂದು ಮಾನ್ಯ ಸದಸ್ಯರು ಹೇಳಿದರು. ಈ ಯೋಜನೆಯ ಬಗ್ಗೆ ಮಾನ್ಯ ಸದಸ್ಯರು ಎಷ್ಟು ಆಸಕ್ತಿ ಇಟ್ಟುಕೊಂಡಿದ್ದರೋ ಅದಕ್ಕಿಂತ ಹೆಚ್ಚಿನ ಆಸಕ್ತಿ ಮತ್ತು ಆಸೆಯನ್ನು ನಾನು ಇಟ್ಟುಕೊಂಡಿದ್ದೇನೆ. ನಾನು ಅನೇಕ ಸಲ ಪ್ರವಾಸ ಮಾಡಿ ಈ ಯೋಜನೆ ಕೆಲಸ ನೋಡಿದ್ದೇನೆ. ಈ ಯೋಜನೆಯಿಂದ ಹೆಚ್ಚಿನ ಅನುಕೂಲವಾಗುವುದು ನನ್ನ ತಾಲ್ಲೂಕಿಗೆ. ಕಂಟ್ರಾಕ್ಟರ್ ಯಾರೇ ಇರಲಿ, ಡ್ಯಾಮ್ ಕೆಲಸವನ್ನೆ ಅವಿವೇಕದಿಂದ ಮಾಡುವುದಕ್ಕೆ ನಾವು ಬಿಡುವುದಿಲ್ಲ. ಹೆಚ್ಚು ಕಡಿಮೆಯಾದರೆ ನಾಳೆ ನಾವೇ ಬಲಿಯಾಗಬೇಕಾಗುತ್ತದೆ. ಈಗ ಅಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿಲ್ಲ ಎಂಬ ಬಗ್ಗೆ ಅಪಸಂಬಿಕೆ ಪಡುವುದು ಸರಿಯಲ್ಲ. ಕೆಲಸ ಜಾಗ್ರತೆ

ಯಾಗಬೇಕೆಂಬ ದೃಷ್ಟಿಯಿಂದ ಆಂದಾಜಿನಲ್ಲಿ ಕೆಲವು ಮಾರ್ಪಾಡುಗಳಾಗಿವೆಯೇ ಹೊರತು ಕೆಲಸ ಚೆನ್ನಾಗಿ ನಡೆಯುತ್ತಿಲ್ಲ ಎಂದು ಹೇಳುವುದು ಸರಿಯಲ್ಲ. ಅದಕ್ಕೆ ನಾವು ಅವಕಾಶವನ್ನು ಸಹ ಕೊಡುವುದಿಲ್ಲ. ನಮ್ಮ ನಾಯಕರು ಹಳೆಯ ಮೈಸೂರಿನ ಯೋಜನೆಗಳ ಬಗ್ಗೆ ಅಷ್ಟೊಂದು ಆಸಕ್ತಿ ತೋರಿಸುತ್ತಿಲ್ಲ ಎಂದು ಆರೋಪಣೆ ಮಾಡುತ್ತಿದ್ದಾರೆ. ಮೈಸೂರು ರಾಜ್ಯದಲ್ಲಿ ಮೇಜರ್ ಇರಿಗೇಷನ್ ಡ್ಯಾಮ್‌ಗಳ ಕೆಲಸ ಜೋರಾಗಿ ನಡೆಯಬೇಕೆಂಬ ದೃಷ್ಟಿಯಿಂದ ಸೌತ್ ಜೋನ್ ಮತ್ತು ನಾರ್ತ್ ಜೋನ್ ಎಂದು ಎರಡು ಭಾಗ ಮಾಡಲಾಗಿದೆ. ನಾರ್ತ್ ಜೋನ್‌ಗೆ ಸಂಬಂಧಪಟ್ಟಂತೆ ಅಲ್ಲಿಯ ಅಧಿಕಾರಿಗಳು ೧೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಸೌತ್ ಜೋನ್‌ಗೆ ಸಂಬಂಧಪಟ್ಟಂತೆ ಇಲ್ಲಿಯ ಅಧಿಕಾರಿಗಳು ಮೂರುವರೆ ಅಥವಾ ನಾಲ್ಕು ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಅಧಿಕಾರಿಗಳು ಮಾಡತಕ್ಕಂಥ ಕಾರ್ಯ ವಿಚಕ್ಷಣೆ ಮತ್ತು ಕಾರ್ಯದಕ್ಷತೆಯನ್ನು ಇದು ತೋರಿಸುತ್ತದೆ. ಅಧಿಕಾರಿಗಳು ಮಾಡತಕ್ಕಂಥ ತಪ್ಪಿನಿಂದ ವೀರೇಂದ್ರ ಪಾಟೀಲರನ್ನು ದೂರುವುದರಿಂದ ಏನೂ ಪ್ರಯೋಜನವಿಲ್ಲ. ಜನತೆಯನ್ನು ಮೆಚ್ಚಿಸುವುದಕ್ಕೆ ಹಣ ಒದಗಿಸುವುದು ಬೇಡ, ನಮಗೆ ಜಾಗ್ರತೆ ಕೆಲಸವಾಗುವುದು ಮುಖ್ಯ ಎಂದು ನಾನು ಶ್ರೀ ವೀರೇಂದ್ರ ಪಾಟೀಲರಿಗೆ ಹೇಳಿದ್ದೇನೆ.

12-30 P.M.

ಅಧಿಕಾರಿಗಳಿಗೆ ಈ ವಿಷಯ ಈಗ ಚೆನ್ನಾಗಿ ಗೊತ್ತಿದೆ. ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುವ ಸನ್ನಿವೇಶದಲ್ಲಿ ನಾನು ನನ್ನ ಮೆಚ್ಚಿಗೆಯನ್ನು ಕೊಟ್ಟಿದ್ದೇನೆ. ಆದರೆ ಅಧಿಕಾರಿಗಳು ಪ್ರಾಮಾಣಿಕರಾಗಿದ್ದರಷ್ಟೇ ಸಾಲದು. ಅವರು ಕರ್ತವ್ಯ ನಿಷ್ಠರೂ ಕಾರ್ಯತತ್ಪರರೂ ಮತ್ತು ಕಾರ್ಯದಕ್ಷರೂ ಆಗಿರಬೇಕು. ಇವೊತ್ತು ಹೇಮಾವತಿ ಯೋಜನೆ ಬಗ್ಗೆ ಹೇಳುವುದಾದರೆ ಸುರ್ಕಿಮಾರ್ಟರ ವಿಷಯದಲ್ಲಿ ಕಂಟ್ರಾಕ್ಟರಿಗೆ ಅನುಕೂಲ ಮಾಡುವುದರ ಬಗ್ಗೆ ಒಂದು ಆರ್ಡರನ್ನು ಬದಲಾಯಿಸಿದರು ಎಂದು ಶ್ರೀಮಾನ್ ನಂಜೇಗೌಡರು ಹೇಳಿದರು. ನ್ಯಾಷನಲ್ ಪ್ರಾಜೆಕ್ಟ್ ಕಟ್ಟುವಾಗ ಸುರ್ಕಿ ಮಾರ್ಟರನ್ನು ಉಪಯೋಗಿಸಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದನ್ನು ಸಿಮೆಂಟ್ ಮಾರ್ಟರಿಗೆ ಬದಲಾಯಿಸಿ ಕೊಳ್ಳಬೇಕು ಎಂದು ಶ್ರೀಮಾನ್ ಕೆ. ಎಲ್. ರಾವ್ ಅವರು ಕೆಲಸ ಮಾಡುತ್ತಿದ್ದರಂತಹ ಒಂದು ಸಂಸ್ಥೆಯಲ್ಲಿ ಅವರು ೧೯೫೬-೫೭ ನೇ ಇಸವಿಯಲ್ಲಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಸುರ್ಕಿ ಮಾರ್ಟರನ್ನು ಉಪಯೋಗಿಸಿ ಕೆಲಸ ಮಾಡುವುದರಿಂದ ಯಾವ ಕ್ವಾಲಿಟಿಯನ್ನೂ ಮೇಂಟೇನ್ ಮಾಡುವುದಕ್ಕಾಗುವುದಿಲ್ಲ, ಆದರೆ, ಕ್ವಾಂಟಿಟಿ ಅಚೀವ್‌ಮೆಂಟ್ ಆಗುತ್ತದೆ ಎಂದು ತಜ್ಞರ ಸಮಿತಿಯವರು, ಸ್ಟೇಟ್ ಟೀಮಿನವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಸಿಮೆಂಟ್ ಮಾರ್ಟರ ಮಾಡುವುದರಿಂದ ಕ್ವಾಲಿಟಿ ಮತ್ತು ಕ್ವಾಂಟಿಟಿ ಎರಡನ್ನು ಅಚೀವ್ ಮಾಡಬಹುದು ಎಂದು ಹೇಳಿದ್ದಾರೆ.

Sri H.N. Nanje Gowda: Then why did he not mention that everything should be done on cement mortar ?

ಶ್ರೀ ಎಚ್. ಡಿ ದೇವೇಗೌಡ:—ಇವೊತ್ತಿನ ದಿವಸ ಶ್ರೀಮಾನ್ ನಂಜೇಗೌಡರು ಆ ಅಣೆಕಟ್ಟು ಕಟ್ಟುವುದರಲ್ಲಿ ಸುರ್ಕಿ ಮಾರ್ಟರಿನಿಂದ ಕಂಟ್ರಾಕ್ಟರಿಗೆ ಆನಾನುಕೂಲವಾಗಿದೆ ಎಂದು ಅವರಿಗೆ ಅನುಕೂಲ ಮಾಡುವುದಕ್ಕೋಸ್ಕರ ಅದನ್ನು ಸಿಮೆಂಟ್ ಮಾರ್ಟರ್ ಮಾಡಬೇಕೆಂದು ಆಂದಾಜನ್ನು ಬದಲಾವಣೆ ಮಾಡಿ ಪುನರ್ ವಿಮರ್ಶೆ ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು.

Sri Azeez Sait:- The Hon Minister in charge of ports is the only Minister who is present here. The Minister of State for Minor irrigation is not here and the Minister of State for Major irrigation and Electricity is sitting in the lounge. The Chair has given a ruling that the concerned Minister should be present in the House when the Demands pertaining to them are being discussed here, and he should honour his own ruling.

MR. DEPUTY SPEAKER:- I shall send word to them.

ಶ್ರೀ ಎಚ್. ಡಿ. ದೇವೇಗೌಡ:- ಸ್ವಾಮಿ, ಈ ಪ್ರಾಜೆಕ್ಟಿನ ಕೆಳಗಡೆ ಬರತಕ್ಕಂತಹ ಅಚ್ಚುಕಟ್ಟುದಾರರ ಹಿತದ ಷ್ಟಿಯಿಂದ ನಾನು ಈ ಸಭೆಯಲ್ಲಿ ಪಾದ ಮಾಡುತ್ತಿದ್ದೇನೆ ಆದಷ್ಟು ಜಾಗ್ರತೆ ಆ ಪ್ರಾಜೆಕ್ಟಿನ ಕೆಳಗಡೆ ಇರತಕ್ಕಂಥ ಅಚ್ಚುಕಟ್ಟುದಾರರಿಗೆ ಅನುಕೂಲಮಾಡಬೇಕು ಎನ್ನುವ ದೃಷ್ಟಿಯಿಂದ ನಾನು ಕೆಲಸ ಮಾಡುತ್ತಿದ್ದೇನೆ. ಈ ಕಾರಣದಿಂದ ಕಂಟ್ರಾಕ್ಟ್‌ದಾರರಿಗೆ ಹಣ ಕೊಡಿಸಲು ಕೆಲಸದಲ್ಲಿ ಒದಲಾವಣೆ ಮಾಡಿದರು ಎಂದ ಅವರು ಟೀಕೆ ಮಾಡಿದ್ದು ಸರಿಯಲ್ಲ. ೧೦ ಲಕ್ಷ ರೂಪಾಯಿಗಳು ಪೆಚ್ಚು ಖರ್ಚಾದರೂ ಕೂಡ ಭದ್ರತೆಯಿಂದ ಕೂಡಿದ ಕೆಲಸವಾಗಬೇಕು. ಬೇಗನೆ ಪ್ರಾಜೆಕ್ಟಿನ ಕೆಲಸ ಮುಗಿದು ಅಚ್ಚುಕಟ್ಟುದಾರರಿಗೆ ಬೇಗನೆ ಅನುಕೂಲವಾಗುವ ದೃಷ್ಟಿಯಿಂದ ಮತ್ತು ಕ್ವಾಲಟಿ ಆಫ್ ದಿ ವರ್ಕ್ ಮೆಂಟೇನ್ ಮಾಡುವ ದೃಷ್ಟಿಯಿಂದ ವ್ಯವಸ್ಥೆಮಾಡುವುದು ಅಗತ್ಯ. ೧೯೬೨ನೇ ಇಸವಿಯಲ್ಲಿ ಚುನಾವಣೆ ಆದ ಕಾಲದಲ್ಲಿ ನನ್ನ ಆಸ್ತಿಯನ್ನು ನಾನು ಡಿಕ್ಲೇರ್‌ಮಾಡಿ ಬಂದಿದ್ದೇನೆ. ನನ್ನ ರಾಜಕೀಯದ ಶುದ್ಧ ಜೀವನದ ವಿಚಾರದಲ್ಲಿ ಅಪನಂಬಿಕೆಯನ್ನು ಯಾರಾದರು ವ್ಯಕ್ತಪಡಿಸುವುದಾದರೆ ಈ ಸಭೆಯ ಸಮಿತಿಯೊಂದನ್ನು ರಚಿಸಿ ವಿಚಾರಣೆ ಮಾಡಲಿ ನಾನು ಆದಕ್ಕೆ ಸಿದ್ಧನಾಗಿದ್ದೇನೆ ಈಗ ನಮಗೆ ಬೇಕಾಗಿರತಕ್ಕದ್ದು ಏನು ಎಂದರೆ ಡ್ಯಾಂ ಕೆಲಸ. ಅದು ಬೇಗ ಆಗಬೇಕು. ೧೦ ಲಕ್ಷ ಅಥವಾ ೨೦ ಲಕ್ಷ ಹೆಚ್ಚು ದುಡ್ಡು ಖರ್ಚಾದರೂ ಚಿಂತೆಯಿಲ್ಲ. ಈ ಕೆಲಸದ ವಿಚಾರದಲ್ಲಿ ಅಧಿಕಾರಿಗಳು ಎಚ್ಚರಿಕೆಯನ್ನು ವಹಿಸಬೇಕು ಮತ್ತು, ಬೇಗ ಕೆಲಸವನ್ನು ಪೂರೈಸಬೇಕಲ್ಲದೆ ಮಾಡಿದಂತಹ ಕೆಲಸ ಭದ್ರತೆಯಿಂದ ಕೂಡಿರಬೇಕು. ಕ್ವಾಲಿಟಿ ಕಂಟ್ರೋಲ್ ಇರಬೇಕು. ಸ್ಪೆಸಿಫಿಕೇಶನ್ ಯಾವರೀತಿ ಮಾಡಬೇಕೋ ಆ ರೀತಿ ಮಾಡುವುದಕ್ಕೆ ಯಾರಯ ಬೇಡ ಎಂದ ಹೇಳುವುದಿಲ್ಲ. ಅವರ ಯಾವುದೇ ಕಾರ್ಯಕ್ರಮಕ್ಕೂ ಯಾರೂ ಅಡ್ಡಿ ಮಾಡಲಿಲ್ಲ. ಆದರೆ ಮಾಡತಕ್ಕ ಕೆಲಸವನ್ನು ನಿಷ್ಠೆಯಿಂದ ಆದಷ್ಟು ಜಾಗ್ರತೆ ಮಾಡತಕ್ಕ ಹವ್ಯಾಸವನ್ನು ಅಧಿಕಾರಿಗಳು ಬೆಳೆಸಿಕೊಳ್ಳಬೇಕು. ಚೀಫ್ ಇಂಜಿನಿಯರಾಗಲಿ, ಎಗ್ಸಿಕ್ಯೂಟೀವ್ ಇಂಜಿನಿಯರಾಗಲೀ, ಸೂಪರಿನ್‌ಟೆಂಡಿಂಗ್ ಇಂಜಿನಿಯರಾಗಲೀ, ಅಥವಾ ಇತರ ಅಧಿಕಾರಿಗಳಾಗಲೀ ಅವರವರ ಕೆಲಸಗಳನ್ನು ಅವರು ಶ್ರದ್ಧೆಯಿಂದ ಮಾಡುವುದಾದರೆ ಕೆಲಸ ವಿಳಂಬವಾಗುವುದಕ್ಕೆ ಅವಕಾಶವಾಗುವುದಿಲ್ಲ. ಈ ಆಣೆಕಟ್ಟಿನ ಕೆಲಸ ಕೋಸ್ಕರ ಸರ್ಕಾರದವರು ೨ ಕೋಟಿ ೩೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರು. ಆ ಹಣವನ್ನು ಪೂರ್ತಿ ಖರ್ಚು ಮಾಡಿ ಆಣೆಕಟ್ಟಿನ ಕೆಲಸವನ್ನು ಮಾಡದೆ ೯೦ ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಸರೆಂಡರ್ ಮಾಡಬೇಕಾದರೆ ಅಧಿಕಾರಿಗಳು ಎಷ್ಟರಮಟ್ಟಿಗೆ ಕೆಲಸಮಾಡಿದ್ದಾರೆ ಎಂಬುದು ಇದರಿಂದಲೇ ವ್ಯಕ್ತವಾಗುತ್ತದೆ. ಆಣೆಕಟ್ಟಿನ ಕೆಲಸ ತ್ವರಿತವಾಗಿ ನಡೆಯುವ ಅಗತ್ಯವಿರುವಾಗ ಈ ರೀತಿ ಮಾಡುವುದು ಸರಿಯೇ? ಇದನ್ನು ಶ್ರೀಮಾನ್ ಶಿವಪ್ಪನವರಾಗಲೀ, ಶ್ರೀಮಾನ್ ನಂಜೇಗೌಡರಾಗಲೀ, ಶ್ರೀಮಾನ್ ಜ್ವಾಲಯ್ಯನವರಾಗಲೀ ಒಪ್ಪುತ್ತಾರೆಯೇ?

ಶ್ರೀ ಮಾನ್ ನಂಜೇಗೌಡರು ಮಾನ್ಯ ಮುಖ್ಯ ಮಂತ್ರಿಗಳಿಗೆ ಬರ್ಡನ್ ಜಾಸ್ತಿ ಇದೆ ಎಂದು ಹೇಳಿದರು. ಇದು ನಿಜ ಅವರನ್ನು ಭೇಟಿ ಮಾಡುವುದಕ್ಕೆ ಬರತಕ್ಕವರಿಗೆ ಸಂದರ್ಶನ ನೀಡಿ ಅವರಿಗೆ ಉತ್ತರ ಹೇಳಿ ಕಳುಹಿಸುವುದೇ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಷ್ಟವಾಗುತ್ತದೆ. ಅದಕ್ಕಾಗಿ ನಾನು ಅವರಿಗೆ ಒಂದು ಸಲಹೆಯನ್ನು ನೀಡುತ್ತೇನೆ. ಅದು ಏನೆಂದರೆ ಈ ಆಣೆಕಟ್ಟುಗಳನ್ನು ಕಟ್ಟುವುದಕ್ಕೆ ಸಂಬಂಧಪಟ್ಟ ಹಾಗು ನೀರಾವರಿ ಯೋಜನೆಗಳ ಪ್ರಗತಿಯ ಬಗ್ಗೆ ಎಷ್ಟರಮಟ್ಟಿನ ಕೆಲಸವಾಗಿದೆ ಏನೇನು ಕೆಲಸಗಳಾಗಿವೆ ಎನ್ನುವ ಬಗ್ಗೆ ಒಂದು ಪೀರಿಯಾಡಿಕಲ್ ರೆವ್ಯೂ ನಡೆಸುವಂತಹ ವ್ಯವಸ್ಥೆ ಮಾಡಬೇಕು. ಮುಖ್ಯ ಮಂತ್ರಿಗಳು, ಪಿ ಡಬ್ಲ್ಯೂ ಡಿ ಮಂತ್ರಿಗಳು ಪಿ.ಡಬ್ಲೂ ಡಿ. ಸೆಕ್ರೆಟರಿಗಳು, ಫೈನಾನ್ಸ್ ಮಿನಿಸ್ಟರ್. ಫೈನಾನ್ಸ್ ಸೆಕ್ರೆಟರಿ, ಆಯಾ ಆಣೆಕಟಿನ ಪರಿಮಿತಿಯಲ್ಲಿ ಬರತಕ್ಕ ಲೆಜಿಸ್ಲೇಟರ್‌ಗಳನ್ನು ಮತ್ತು ಸಂಬಂಧಪಟ್ಟ ಮುಖ್ಯ ಅಧಿಕಾರಿಗಳನ್ನು ಒಳಗೊಂಡಂತಹ ಒಂದು ಸಮಿತಿಯನ್ನು ಮಾಡಬೇಕು. ಮತ್ತು ಸಮಿತಿಯವರು ನೀರಾವರಿಯೋಜನೆಗಳ ಬಗ್ಗೆ ಒಂದುಪೀರಿ ಪ್ರಗತಿ ಯಯಾಡಿಕಲ್ ರೆವ್ಯೂ ತಯಾರಿಸಿ ಏನಾದರು ತೊಂದರೆಯಾದರೆ ಆದರ ನಿವಾರಣೆಗೆ ಸ್ಥಳದಲ್ಲಿಯೇ ನಿರ್ಣಯತೆಗೆ ದುಕೊಳ್ಳಲು ಅವಕಾಶವಾಗುವಂತೆ ಒಂದು ವ್ಯವಸ್ಥೆ ಮಾಡುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ.

ಮತ್ತೊಂದು ವಿಷಯ ಏನೆಂದರೆ ಇಂಜಿನಿಯರ್ ಗಳು ರಾತ್ರಿ ಹಗಲು ಕೆಲಸ ಮಾಡುವಂತಹ ವ್ಯವಸ್ಥೆಯನ್ನು ನಮ್ಮ ಸರ್ಕಾರದವರು ಮಾಡಿ ಜಾಗ್ರತೆ ಕೆಲಸ ಮಾಡಬೇಕು. ಇನ್ನು ಮಾನ್ಯ ನಂಜೇಗೌಡರು ಬಜೆಟ್ಟಿನಲ್ಲಿ ೧೦ ಲಕ್ಷ ರೂಪಾಯಿ ಕೊಟ್ಟಿದ್ದಾರೆಂದು ಹೇಳಿದರು. ಹಣದ ಬಗ್ಗೆ ಟೋಕನ್ ಸ್ಯಾಂಕ್ಷನ್ ಆಗಿದೆ ಎಂದು ಕಾಣುತ್ತದೆ. ಇಲ್ಲಿ ಹಣದ ಪ್ರಶ್ನೆಯಲ್ಲ. ಇಲ್ಲಿ ಕೆಲಸಮಾಡತಕ್ಕಂತಹ ವ್ಯಕ್ತಿಗಳು ಏನಿದ್ದಾರೆ, ಮೆನ್ ಅಂಡ್ ಮೆಟೀರಿಯಲ್ಸ್ ಏನಿದೆ ಅದು ಒಳ್ಳೆಯದಾಗಿರಬೇಕು. ಆಲ್ಲಿ ದಕ್ಷರಾಗಿರುವಂತಹ ಅಧಿಕಾರಿಗಳು ಬೇಕು. ಇವತ್ತು ಹೊಸದಾಗಿ ಕೆಲವು ಡಿವಿಜನ್ಸ್ ಸ್ಯಾಂಕ್ಷನ್ ಮಾಡಬೇಕಾದರೆ, ಅದು ಆರ್ಥಿಕ ಇಲಾಖೆಗೆ ಹೋಗಬೇಕಾಗುತ್ತದೆ. ಹೀಗೆ ಈ ರೀತಿಯ ಗೊಂದಲ ಮಾಡುವುದು ಬೇಡ. ಡ್ಯಾಮ್‌ಗಳಿಗೆ ಯಾವ್ಯಾವ ಕೆಲಸಗಳನ್ನು ಮಾಡಬೇಕೋ, ಅದನ್ನು ಮಾಡಬೇಕಾಗುತ್ತದೆ.

ಇನ್ನು ಲಿಫ್ಟ್ ಇರಿಗೇಶನ್ ಬಗ್ಗೆ ಹೇಳುವುದಾದರೆ, ಮಾನ್ಯ ದೊಡ್ಡಮೇಟಿಯವರು ಅನಾರೋಗ್ಯ ದಿಂದ ಇದ್ದಾರೆ, ಅವರಿಗೆ ಶೀಘ್ರವಾಗಿ ಗುಣವಾಗಲಿ. ಈ ಇಲಾಖೆಯಲ್ಲಿ ಎಷ್ಟು ಜನರಿದ್ದಾರೆಂಬುದನ್ನು ಹೇಳಬೇಕು ಆದ್ದರಿಂದ ನಾನು ಡೆವಲಪ್‌ಮೆಂಟ್ ಕಮೀಷನರ್‌ರವರ ಶಕ್ತಿ ಬಗ್ಗೆ ಅಳತೆ ಮಾಡುವುದಕ್ಕೆ ಹೋಗುವುದಿಲ್ಲ; ಅವರ ತಿಳಿವಳಿಕೆ ಬಗ್ಗೆ ಅಳತೆ ಮಾಡುವುದಕ್ಕೆ ಹೋಗುವುದಿಲ್ಲ. ಬಜೆಟ್ಟಿನಲ್ಲಿ ನೂರಾರು ಸ್ಕೀಮುಗಳನ್ನು ಮಂಜೂರಾತಿ ಮಾಡಿದರೆ, ಅದನ್ನು ಕಾರ್ಯಗತ ಮಾಡುವವರು ಯಾರು? ಮತ್ತೆ ಕೋ ಆಪರೇಷನ್ ಡಿಪಾರ್ಟ್‌ಮೆಂಟ್ ಎಂದು ಹೇಳುತ್ತಾರೆ. ಹೊಸ ಮಂತ್ರಿಮಂಡಲ ಅಸ್ತಿತ್ವಕ್ಕೆ ಬಂದ ಮೇಲೆ ಪ್ರಾಯಶಃ ಎರಡನೇ ಕ್ಯಾಬಿನೆಟ್ ಮೀಟಿಂಗಿನಲ್ಲಿ ಸುಮಾರು ೧೯ ಲಿಫ್ಟ್ ಇರಿಗೇಶನ್‌ನ್ನ ಎ.ಆರ್.ಪಿ. ತೆಗೆದುಕೊಳ್ಳಬೇಕೆಂದು ರೆಫರ್ ಮಾಡಿದರು. ದರಲ್ಲಿ ಒಂದು ಲಿಫ್ಟ್ ಇರಿಗೇಶನ್ ಸ್ಕೀಮನ್ನಾದರೂ ಅವರು ಕ್ಲಿಯರೆನ್ಸ್ ಮಾಡಿದರೆ ನಾನು ನನ್ನ ಆಪಾದನೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಇದರಲ್ಲಿ ನಿಮ್ಮ ಗೌರವದ ಪ್ರಶ್ನೆ ಇದೆಯೇ ಎಂದು ನಾನು ಕೇಳುತ್ತೇನೆ. ಇವತ್ತು ತಮಗೆ ಹೇಳುವುದಾದರೆ, ಮೆಟ್ಟೂರ್ ಡ್ಯಾಮಿನ ತಳಭಾಗದಲ್ಲಿ ಸುಮಾರು ಒಂದು-ಒಂದೂವರೆ ಲಕ್ಷ ಎಕರೆಗಳಷ್ಟು ಜಮೀನನ್ನು ಅವರು ಇರಿಗೇಶ್ ಮಾಡುತ್ತಿದ್ದಾರೆ.

ಈಗ ನೀವು ಮಾಡಿರುವ ಕೆಲಸಕ್ಕೇ ನೀವು ತೃಪ್ತಿ ಪಟ್ಟುಕೊಳ್ಳುವುದಾದರೆ, ಪ್ರಾಯಶಃ ಇದಕ್ಕೆ ನಾನು ವಿಶಾದವನ್ನು ವ್ಯಕ್ತಪಡಿಸಬೇಕಾಗುತ್ತದೆ. ಇವತ್ತು ನಾವು ನೂರಾರು ಸ್ಕೀಮುಗಳನ್ನು ತಯಾರು ಮಾಡಿ ಅದಕ್ಕೆ ಕೇವಲ ಎರಡು ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಇದರ ಉದ್ದೇಶವಾದರೂ ಏನು ? ಅದನ್ನು ಹೇಗೆ ಕಾರ್ಯಗತ ಮಾಡಬೇಕು? ಕಬಿನಿ ಬಗ್ಗೆ ಮಾನ್ಯ ಸದಸ್ಯರು ಎಲ್ಲಾ ಏನು ಯೋಚನೆ ಮಾಡಿ, ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ,ಅದನ್ನು ಪಾಲಿಸಬೇಕು. ಬೇಕಾದರೆ,ಅಧಿಕಾರಿಗಳ ಜೊತೆ, ಹಿರಿಯ ಸದಸ್ಯರ ಜೊತೆ ಚರ್ಚೆ ಮಾಡಿ ಆದಷ್ಟು ಜಾಗ್ರತೆ ಒಂದು ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮಾಡಿದ್ದಾರೆ. ಮಾನ್ಯ ನಂಜೇಗೌಡರು ಇದರ ಬಗ್ಗೆ ಹೇಳಿದ್ದಾರೆ. ಇದನ್ನು ಮಾಡಿದ ಉದ್ದೇಶ ದೇಶದಲ್ಲಿ ನಡೆಯತಕ್ಕಂತಹ ನಾನಾ ಮೇಜರ್ ಇರಿಗೇಶನ್ ಕಂಟ್ರಾಕ್ಟ್‌ಗಳನ್ನು ಅವರ ವತಿಯಲ್ಲಿ ಪಡೆದು, ಕ್ವಾಲಿಟಿ ಮತ್ತು ಕ್ವಾಂಟಿಟಿ ಸರಿಯಾಗಿರುವಂತೆ, ಸರಿಯಾದ ರೀತಿಯಲ್ಲಿ ಕೆಲಸ ಮಾಡಲಿ ಎಂಬ ಹಿರಿಯ ಆಸೆಯಿಂದ ಅದನ್ನು ಮಾಡಿದ್ದಾರೆ ಎಂದು ಕಾಣುತ್ತದೆ. ಇವತ್ತು ಇದು ಒಂದು ವ್ಯಾಪಾರೋದ್ಯಮದ ಹಾಗೆ ಕಾಣುತ್ತದೆ. 'ಎ' ಎಂಬುವರು ಕಂಟ್ರಾಕ್ಟ್ ತೆಗೆದುಕೊಂಡು 'ಬ'ಗೆ ಸಬ್ ಲೀಸ್ ಮಾಡುವುದು. ಕಾರ್ಪೊರೇಶನಿಗೆ ಹಾಕತಕ್ಕ ಬಂಡವಾಳ ಏನು, ಉದ್ದೇಶವೇನು ಎಂದು ಮಾನ್ಯ ನಂಜೇಗೌಡರು ಕೇಳಿದ್ದಾರೆ, ಅದು ವಾಸ್ತವಾಂಶ. ಕಂಟ್ರಾಕ್ಟ್ ಕೊಟ್ಟು ಕ್ಯಾನ್ಸಲ್ ಮಾಡುವುದು ಮತ್ತು ಪರಿಹಾರ ಕೊಡುವುದು. ಇಂಥ ಸಮಸ್ಯೆಗಳನ್ನು ತೊಡೆದು ಹಾಕಬೇಕು. ಅದಕ್ಕೆ ರಾಜ್ಯದ ವತಿಯಿಂದ ಒಂದು ಕನ್‌ಸ್ಟ್ರಕ್ಷನ್ ಕಾಳ್ಪೊರೇಶನ್ ನೀವು ಮಾಡಬಹುದು. ಅದಕ್ಕೆ ಇವತ್ತು ದೇಶದಲ್ಲಿ ಇರತಕ್ಕ ನಿರುದ್ಯೋಗ ಇಂಜಿನಿಯರನ್ನು, ಡಿಪ್ಲೊಮೋ ಹೋಲ್ಡರ್ಸ್‌ನ್ನು ಎಲ್ಲಾ ತೆಗೆದುಕೊಳ್ಳಬಹುದು. ಅವರ ಜೀವನಕ್ಕೆ ಒಂದು ಮಾರ್ಗವನ್ನಾಗಿ ಮಾಡಬಹುದು. ಇವತ್ತಿನ ವರೆಗೆ ಎಷ್ಟು ಕಂಟ್ರಾಕ್ಟ್ ಪಡೆದಿದ್ದಾರೆ, ಎಷ್ಟು ಕೆಲಸವನ್ನು ಮಾಡಿದ್ದಾರೆ? ಇವತ್ತು ನೀವು ಸಬ್‌ಲೀಸ್‌ಮಾಡಿ ಮೂರು ನಾಲ್ಕು ಜನ ಅಧಿಕಾರಿಗಳಿಗಾಗಿ ಈ ಸಂಸ್ಥೆಯನ್ನು ಮಾಡದೆ ಕ್ಲೋಸ್ ಮಾಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಅದಕ್ಕೆ ಇವತ್ತು ಒಳ್ಳೆಯ ಅಧಿಕಾರಿಯನ್ನು ಹುಡಿದ್ದಾರೆಂದು ತಿಳಿಯುತ್ತೇನೆ. ಇನ್ನು ಮುಂದಾದರು ಅದರ ನೈಜ ಸ್ವರೂಪವನ್ನು ತಾಳಿ ನಮ್ಮ ಆಶೋತ್ತರಗಳನ್ನು ಈಡೇರಿಸುವಂತೆ ಕೆಲಸ ಮಾಡಲಿ ಎಂದು ಹೇಳುತ್ತೇನೆ.

ಇನ್ನು ಟೆಕ್ನಿಕಲ್ ಆಡಿಟ್ ಸೆಲ್. ಇದನ್ನು ಯಾರ ಕಣ್ಣು ಒರೆಸುವುದಕ್ಕೋಸ್ಕರ ಮಾಡಿದ್ದಾರೆಂದು ಗೊತ್ತಿಲ್ಲ. ಇವತ್ತು ನಾನು ತಪ್ಪು ಏನಾದರೂ ಇದ್ದರೆ, ತಪ್ಪೆಂದು ಹೇಳುತ್ತೇನೆ. ಎಷ್ಟು ಕೆಲಸಗಳನ್ನು ಟೆಕ್ನಿಕಲ್ ಆಡಿಟ್ ಸೆಲ್ಲಿನವರು ಪರಿಶೀಲನೆ ಮಾಡಬೇಕೆಂದು ಸರ್ಕಾರದವರು ಡೈರೆಕ್ಟಿವ್ ಕೊಟ್ಟಿದ್ದಾರೆ ? ನಾನು ಶಾಸನಸಭಾ ಸದಸ್ಯನಾಗಿ ಬಂದಮೇಲೆ ನನ್ನ ತಾಲ್ಲೂಕಿನಲ್ಲಿ ಒಬ್ಬರ ಬಗ್ಗೆ ಆಂಟಿ ಕರಪ್ಷನ್ ಅಧಿಕಾರಿಗಳಿಗೆ ವಿಚಾರಣೆಗೆ ಹೋಯಿತು. ಆದರೆ ಇವತ್ತಿನ ವರೆಗೂ ಆದರ ಬಗ್ಗೆ ಏನೂ ಆಗಿಲ್ಲ. ಆ ಅಧಿಕಾರಿಗೆ ಪುನಃ ಪ್ರಮೋಶನ್ ಆಗಿ ಹೋಗಿದ್ದಾನೆ. ಇವತ್ತು ನಾನು ಅಲ್ಲಿಗೆ ಹೋದಾಗ ಅಲ್ಲಿಯ ಜನರೆಲ್ಲಾ ನನ್ನ ನೋಡಿ ಕೇಕೆ ಹಾಕಿ ನಗುತ್ತಿದ್ದಾರೆ. ಅವರ ಕಣ್ಣೆದುರಿನಲ್ಲಿ ನಾವು ಕೇವಲ ಅಲ್ಪವ್ಯಕ್ತಿಗಳಾಗಿದ್ದೇವೆ. ಇವತ್ತು ನಾನು ಟೆಕ್ನಿಕಲ್ ಆಡಿಟ್ ಸೆಲ್ಲಿನ ಅಧಿಕಾರಿಗಳ ಪ್ರಾಮಾಣಿಕತನದ ಬಗ್ಗೆ ಪ್ರಶ್ನೆ ಮಾಡುತ್ತಾ ಇಲ್ಲ. ಆದರೆ ಅವರಿಗೆ ಸರಿಯಾದಂತಹ ಸ್ಟಾಫ್ ಕೊಟ್ಟು ಕೆಲಸಮಾಡಿಸುತ್ತಾ ಇಲ್ಲ. ಹಿಂದೆ ನಾನು ಒಂದು ಸಲಹೆಯನ್ನು ಮಾಡಿದ್ದೆ. ಅಂದರೆ ಬಸವರಾಜ ಅರಸರನ್ನು ಚೀಫ್ ಇಂಜಿನಿಯರನ್ನಾಗಿ ಮಾಡಿ ಎಂದು ಹೇಳುತ್ತಾ ಇಲ್ಲ; ಈ ಹುದ್ದೆಯನ್ನು ಚೀಫ್ ಇಂಜಿನಿಯರ್ ಹುದ್ದೆಗೆ ಏರಿಸಿ ಎಂದು ಹೇಳಿದ್ದೆ. ಒಬ್ಬ ಸಬಾರ್ಡಿನೇಟ್ ಆಫೀಸರ್ ಆಗಿರುವವನ್ನು ಚೀಫ್ ಇಂಜಿಯರ್ ಮೇಲೆ ರಿಪೋರ್ಟ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ

(ಶ್ರೀ ಹೆಚ್. ಡಿ, ದೇವೇಗೌಡ)

ಅದನ್ನು ಅಪ್‌ಗ್ರೇಡ್ ಮಾಡಿ ಬೇರೆ ಇಲಾಖೆಯ ಮುಖ್ಯ ಅಧಿಕಾರಿಗಳ ಸಮಕ್ಕೆ ಏರಿಸಬೇಕು. ಇಲ್ಲದಿದ್ದರೆ ಯಾವ ಕಾರ್ಯವನ್ನೂ ಅವರು ತ್ವರಿತವಾಗಿ ಮಾಡುವುದಕ್ಕಾಗುವುದಿಲ್ಲ. ಯಾವುದೇ ಒಂದು ಮಾರ್ಟರ್ ಟೆಸ್ಟ್ ಮಾಡಬೇಕಾದರೆ, ಅದನ್ನು ಕೆ.ಆರ್.ಎಸ್.ಗೆ ಕಳಿಸಬೇಕು. ಅಲ್ಲಿ ಟೆಸ್ಟ್ ಮಾಡಲು ಮೂರು-ನಾಲ್ಕು ಐದು ವರ್ಷವಾಗುತ್ತದೆ. ಹೀಗಿರುವುದರಿಂದ ಅದರ ಉದ್ದೇಶ ಸಾಧನೆಯಾಗುವುದಿಲ್ಲ. ಇದರಿಂದ ತಪ್ಪಿತಸ್ಥ ಅಧಿಕಾರಿಯ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಲು ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಆದ್ದರಿಂದ ಇದಕ್ಕೆ ಬೇಕಾದ ಎಲ್ಲಾ ಸೌಕರ್ಯಗಳನ್ನೂ ಅದಷ್ಟು ಜಾಗ್ರತೆ ಸಿಗುವಂತೆ ಸರ್ಕಾರದವರು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಎನ್‌ಜಿನೀಯರಿಗಳನ್ನು ಅದಷ್ಟು ಜಾಗ್ರತೆಯಾಗಿ ಮುಂಗಿಸಿ, ಸಕಾಲದಲ್ಲಿ ತಕ್ಕ ಶಿಸ್ತಿನ ಕ್ರಮವನ್ನು ತಪ್ಪಿತಸ್ಥರ ಮೇಲೆ ತೆಗೆದುಕೊಳ್ಳಬಹುದು.

ಇನ್ನು ಮೈನರ್ ಇರಿಗೇಷನ್ ಬಗ್ಗೆ ಪರ್ಫಾರ್ಮೆನ್ಸ್ ಆಡಿಟ್ ಸೆಲ್ ಇಟ್ಟುಕೊಂಡಿರುತ್ತಾರೆ. ಆದರೆ ಸಾಕಷ್ಟು ಆಸಕ್ತಿ ವಹಿಸುತ್ತಾ ಇಲ್ಲ. ಟ್ಯಾಂಕ್ ರಿಪೇರಿಗೆ ಮತ್ತು ಮೈಂಟೆನೆನ್ಸ್‌ಗೆ ಹಣ ಖರ್ಚುಮಾಡುತ್ತಾರೆ ಎಲ್ಲೆಲ್ಲಿ ಹಣ ಖರ್ಚಾಗುತ್ತದೆ, ಅದೆಲ್ಲವನ್ನೂ ಚೀಫ್ ಇಂಜಿನಿಯರ್ ನೋಡಿಕೊಂಡು ಅಲ್ಲಿ ಆಗತಕ್ಕ ತಪ್ಪುಗಳನ್ನು ಪರಿಶೀಲನೆ ಮಾಡುವುದಕ್ಕಾಗುವುದಿಲ್ಲ. ಅವರಿಗೆ ೧೯ ಜಿಲ್ಲೆಗಳಲ್ಲಿ ಆಗುವ ಕೆಲಸಗಳನ್ನು ಪರಿಶೀಲನೆ ಮಾಡುವುದಕ್ಕಾಗುವುದಿಲ್ಲ. ಒಂದೊಂದು ಕೆರೆಗೆ ೩-೪ ಎಸ್ಟಿಮೇಟ್ ಮಾಡಿದ್ದಾರೆ. ಎಲ್ಲಾ ಅಧಿಕಾರಿಗಳು ಸತ್ಯವಂತರು ಎಂದು ನಾನು ಹೇಳುವುದಿಲ್ಲ, ಅಥವಾ ಎಲ್ಲಾ ಅಧಿಕಾರಿಗಳು ಅಸತ್ಯವಂತರೂ ಎಂದು ಸಹ ಹೇಳುವುದಿಲ್ಲ. ಆದಕ್ಕೋಸ್ಕರ ಈ ಪರ್ಫಾರ್ಮೆನ್ಸ್ ಆಡಿಟ್ ಸೆಲ್ ಮಾಡಿ ಎಂದು ಹೇಳಿದ್ದು. ಆದರ ಬಗ್ಗೆ ಸರ್ಕಾರ ಆಸಕ್ತಿ ವಹಿಸುವುದಿಲ್ಲವೋ ಏನೊ ?

ಇನ್ನು ಈ ಕಂಟ್ರಾಕ್ಟ್ ಸಿಸ್ಟಂ. ಕಂಟ್ರಾಕ್ಟ್ ರಿಜಿಸ್ಟ್ರೇಷನ್ ಸಿಸ್ಟಂನ್ನು ಮಾನ್ಯ ಚನ್ನಬಸಪ್ಪನವರು ಎಕ್ಸಿಕ್ಯೂಟಿವ್ ಆರ್ಡರ್ ಮೇಲೆ ಇದನ್ನು ಜಾರಿಗೆ ತಂದರು. ನಿಮ್ಮ ಈ ಕಾನೂನಿನ ಚೌಕಟ್ಟಿನಲ್ಲಿ ಶಿಕ್ಷೆ ಕೊಡುವುದಕ್ಕೆ ಏನು ಅವಕಾಶ ಇದೆ? ಎ.ಬಿ.ಸಿ. ಗ್ರೇಡಿನ ಮೇಲೆ ಕಂಟ್ರಾಕ್ಟ್ ರಿಜಿಸ್ಟರ್ ಮಾಡುವ ಕಾಲದಲ್ಲಿ ಅವರು ಕೊಡತಕ್ಕ ಸಾಲ್ವೆನ್ಸಿ ಸರ್ಟಿಫಿಕೇಟನ್ನು ಯಾವ ಪ್ರಾಪರ್ಟಿ ಮೇಲೆ ಕೊಡುತ್ತಾರೆ ? ಅದನ್ನು ಮಾರ್ಟಗೇಜ್ ಮಾಡುವುದಕ್ಕೆ ಅಥವಾ ಮಾರಾಟ ಮಾಡುವುದಕ್ಕೆ ಅಧಿಕಾರ ಇದೆಯೇ?

ಇವತ್ತು ಕಂಟ್ರಾಕ್ಟ್ ತೆಗೆದುಕೊಳ್ಳುವಾಗ ಸಾಲ್ವನ್ಸಿ ಪಡೆಯುತ್ತಾನೆ. ನಾಳೆ ಅವನನ್ನು ಕೇಳಿದರೆ ಗತಿ ಇರುವುದಿಲ್ಲ. ಅವನು ಬೀದಿ ಬಿಕಾರಿಯಾಗಿರುತ್ತಾನೆ. ಇದರಲ್ಲಿ ಲೀಗಲ್ ಸ್ಟ್ಯಾಂಕ್ಟಿಟಿ ಏನಿದೆ ಯೆಂಬುದನ್ನು ನೋಡಬೇಕು. ಕಟ್ರಾಕ್ಟ್ ಪಡೆಯುವ ಬಗ್ಗೆ ಪ್ರಾಪರ್ಟಿ ಆಧಾರದ ಮೇಲೆ ಸಾಲ್ವನ್ಸಿ ಕೊಟ್ಟಿರುತ್ತಾನೆ. ಆದ್ದರಿಂದ ಆತ ಅದನ್ನು ಬೇರೆ ಕಡೆಗೆ ಮಾರಾಟಮಾಡುವ ಬಗ್ಗೆ ನೀವು ಏನು ಕಾನೂನನ್ನು ಮಾಡಿದ್ದೀರಿ? ಈ ಒಂದು ಕ್ವಟ್ರಾಕ್ಟ್ ಸಿಂಸ್ಟಂನಲ್ಲಿ ಈಒಂದು ಕಾಯಿದೆಯನ್ನು ತೆಗೆದುಕೊಂಡು ಬರಬೇಕು. ಒಬ್ಬರು ಸಾಲ್ವನ್ಸಿ ಕೊಟ್ಟರೆ ವ್ಯವಹಾರ ಮಾಡುವಾಗ ತಪ್ಪುಮಾಡಿದಂಥವರಿಗೆ ಶಿಕ್ಷೆ ಮಾಡುವ ಬಗ್ಗೆ ಒಂದು ಕಾನೂನನ್ನು ತೆಗೆದುಕೊಂಡು ಬರಬೇಕು. ಅದಿಲ್ಲದೆ ಈಗ ಎಗ್ಜಿಕ್ಯುಟಿವ್ ಆರ್ಡರ್ ಏನು ಮಾಡಿದ್ದೀರೋ ಅದಕ್ಕೆ ಯಾವುದೇ ಉಪಯೋಗವಾಗುವುದಿಲ್ಲ. ಸರ್ಕಾರಕ್ಕೆ ಇದರಲ್ಲಿ ಹೆಚ್ಚಿನ ಹಿಡಿತ ಇರಬೇಕು. ಅವರು ಅದರ ಬಗ್ಗೆ ಪರಿಶೀಲನೆಮಾಡಬೇಕು.

ಇನ್ನು ಡಿಪ್ಲೊಮಾ ಹೋಲ್ಡರ್ಸ್ ಮತ್ತು ಸೀನಿಯರ್ ಇಂಜನಿಯರಿಂಗ್ ಗ್ರ್ಯಾಜುಯೇಟ್ಸ್‌ಗಳ ಅನುಕೂಲಕ್ಕಾಗಿ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಇದು ಮೂಗಿಗೆ ತುಪ್ಪ ಹಚ್ಚಿದಂತಾಗಿದೆ. ಬಡಪಾಯಿಗಳು ಕಂಟ್ರಾಕ್ಟ್ ತೆಗೆದುಕೊಂಡಾಗ ಶೇಕಡ ೫ ರಷ್ಟು ಇ.ಎಂ.ಡಿ. ಯನ್ನು ಅವನ ಬಿಲ್ಲಿನಲ್ಲಿ ರಿಕವರಿ ಮಾಡಬೇಕೆಂದಿದೆ. ಅವನು ೩ ಸಾವಿರ, ೪ ಸಾವಿರ, ೫ ಸಾವಿರ ಬಿಲ್ ತೆಗೆದು ಕೊಂಡು ಹೋದರೆ ಒಟ್ಟು ಕಾಸ್ಟ್‌ನಲ್ಲಿ ಇ.ಎಂ.ಡಿ.ಯನ್ನು ಮೊದಲೇ ಅವನ ಬಿಲ್ಲಿನಲ್ಲಿ ರಿಕವರಿ ಮಾಡುವುದು ಸರಿಯಿಲ್ಲ. ಎಲ್ಲೋ ಅವನು ಆ ಹಣವನ್ನು ಸಾಲತೆಗೆದುಕೊಂಡು ಬಂದಿರುತ್ತಾನೆ. ಆದರೆ ಅವನಿಂದ ಇ.ಎಂ.ಡಿ. ಯನ್ನು ರಿಕವರಿ ಮಾಡಬೇಕೆಂದು ಯಾವ ಉದ್ದೇಶದಿಂದ ಆರ್ಡರ್ ಮಾಡಿದ್ದರೋ ಗೊತ್ತಿಲ್ಲ. ಬಿಲ್ ಅಮೌಂಟ್ ಎಷ್ಟಾಗುತ್ತದೋ ಅದರಲ್ಲಿ ಶೇಕಡ ೫ ರಷ್ಟನ್ನು ಡಿಪಾಜಿಟ್ ಇಡಿ ಎಂದು ಹೇಳಿದರೆ ಆಗ ಇದು ಸರಿಹೋಗುತ್ತದೆ. ಬಡಪಾಯಿಗಳಿಗೆ ನಿಜವಾಗಿ ಉಪಯೋಗವಾಗಬೇಕೆಂದು ಆಶೆ ಇದ್ದರೆ ಅವರಿಗೆ ಮೊದಲೇ ಅಡ್ವಾನ್ಸ್ ಕೊಡಿ. ಅವರು ಏನೂ ಕದ್ದುಕೊಂಡು ಹೋಗುವುದಿಲ್ಲ. ಶೇಕಡ ೭೫ ರಷ್ಟು ಅಡ್ವಾನ್ಸನ್ನು ಅವರಿಗೆ ಕೊಡಿ. ಆಗ ಅವರ ಒಂದು ಆರ್ಥಿಕ ಜೀವನ ಸರಿಯಾಗಿ ನಡೆಸುವುದಕ್ಕೆ ಅನುಕೂಲವಾಗುತ್ತದೆ. ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಮೆಕಾನಿಕಲ್ ಸೆಕ್ಷನ್ ಬಗ್ಗೆ ಮಾನ್ಯ ಶ್ರೀ ನಂಜೇಗೌಡರು ಒಂದು ಮಾತನ್ನು ಹೇಳಿದರು. ಅಲ್ಲಿ ಎಷ್ಟು ಲಾರಿಗಳನ್ನು ಮೇಂಟೇನ್ ಮಾಡುತ್ತಾರೆ, ಎಷ್ಟು ಹಣ ಅಲ್ಲಿ ಕಲೆಕ್ಷನ್ ಆಗುತ್ತದೆಂಬುದಕ್ಕೆ ಲೆಕ್ಕವೇ ಇಲ್ಲ. ಅವರ ಹತ್ತಿರ ಒಂದು ಚಾರ್ಟ್ ಇಟ್ಟುಕೊಂಡಿರುವುದಿಲ್ಲ. ಡ್ರೈವರ್ಸ್‌ಗೆ ೨ ರೂಪಾಯಿ ಕೊಟ್ಟರೆ ಸಾಕು, ಅಲ್ಲಿ ಸೂಪರ್‌ವಿಷನ್ ಇರುವುದಿಲ್ಲ. ಇದರಿಂದ ಬೇಕಾದಷ್ಟು ಲುಕ್ಸಾನು ಆಗುತ್ತಿದೆ, ನಿಮ್ಮ ಪ್ಯಾಪ್ತಿಯಲ್ಲಿ ಈ ಇಲಾಖೆಗಳ ಚಟುವಟಿಕೆಗಳು ಮತ್ತಷ್ಟು ಹೆಚ್ಚಬೇಕು. ಪಿ.ಡಬ್ಲ್ಯು.ಡಿ.ಯಲ್ಲಿ ಬೇಕಾದಷ್ಟು ನಷ್ಟ ಆಗುತ್ತಿದೆ, ಡಿಪಾರ್ಟ್‌ಮೆಂಟ್ ಲಾರಿಗಳು ಕಂಟ್ರಾಕ್ಟರ್ಸ್ ಸ್ವತ್ತಾಗಿ ಹೋಗಿವೆ. ಏಕೆಂದರೆ ಅಧಿಕಾರಿಗಳ ಸ್ವಾರ್ಥತೆಯಿಂದ ಆ ರೀತಿ ಆಗಿದೆ. ಇಲಾಖೆಯ ಮುಖ್ಯಾಧಿಕಾರಿಗಳು ಬಹಳ ತಜ್ಞರು ಇದ್ದಾರೆ. ಅವರು ಇಂಥಾದ್ದನ್ನು ತಡೆಗಟ್ಟುವುದಕ್ಕೆ ಏನಾದರೂ ಯೋಚನೆಮಾಡಬೇಕು. ಇಲಾಖೆಯೊಳಗೆ ನಮ್ಮ ಅಧಿಕಾರಿಗಳಿಗೆ ಈಗ ಪವರ್ಸ್ ಕೊಟ್ಟಿದ್ದಾರೆ. ಅವರು ಸುಮಾರು ಹತ್ತಾರು ಸಾವಿರ ರೂಪಾಯಿಗಳವರೆಗೆ ಮೈನರ್ ಇರಿಗ್ರೇಷನ್ ವರ್ಕ್ ಆರ್ಡರ್ ಕೊಡಬಹುದು ಎಂದು ಹೇಳುತ್ತಾರೆ ಅಧಿಕಾರಿಗಳಿಗೆ ೫೦ ಸಾವಿರ ರೂಪಾಯಿಗಳವರೆಗೂ ಕೂಡಬಹುದು. ಇಲ್ಲದಿದ್ದರೆ ಇಲ್ಲ ಅಲ್ಲಿ ಕೆಲಸಹೀಗೆ ಆಗಿದೆ. ಮೈಸೂರು ದೇಶದಲ್ಲಿ ಸೇಲ್ಸ್‌ಟ್ಯಾಕ್ಸ್, ಎಕ್ಸ್‌ಜ್ ಮತ್ತು ಇನ್‌ಕಮ್‌ಟ್ಯಾಕ್ಸ್ ಇಲಾಖೆಗಳಲ್ಲಿನೋಡಿದ್ದೇನೆ. ಆಲ್ಲಿ ಬೇಕಾದಷ್ಟು ನಷ್ಟವಾಗುತ್ತಿದೆ. ಅದನ್ನು ಮಂತ್ರಿಗಳು ಸರಿಮಾಡುತ್ತೇವೆಂದು ಹೇಳುತ್ತಾರೆ. ಅದು ಒಂದು ಹುಚ್ಚು. ಹಿಂದೆ ಪಬ್ಲಿಕ್ ಎನ್‌ಕ್ವೈರಿ ಬಿಲ್ಲನ್ನು ನಾನೇ ೧೯೬೬ ರಲ್ಲಿ ಈ ಸಭೆಗೆ ತಂದಿದ್ದೆ. ನಾನು ಅದನ್ನು ವೈಯಕ್ತಿಕವಾಗಿ ಸ್ವಾಗತಮಾಡುತ್ತೇನೆ. ಈ ದೇಶದಲ್ಲಿ ಇದಕ್ಕೆ ಒಂದು ಕೊನೆಯಾಗಬೇಕು. ಈ ದೇಶದಲ್ಲಿ ಎಲ್ಲರೂ ಕಳ್ಳರು ಎಂದು ಮಾನ್ಯ ಶ್ರೀ ದಯಾನಂದಸಾಗರ್ ಅವರು ಹೇಳುತ್ತಾರೆ: ಮಾನ್ಯ ಶ್ರೀ ಲಕ್ಕಪ್ಪನವರು ೧೦ ಲಕ್ಷ ರೂಪಾಯಿಗಳನ್ನು ಹೊಡೆದರೆಂದು ಹೇಳಬಹುದು. ಆ ತರಹ ಭಾಷಣವನ್ನು ನಾನು ಮಾಡುವುದಕ್ಕಾಗುವುದಿಲ್ಲ. ಪ್ರತಿಯೊಬ್ಬ ಅಧಿಕಾರಿಯೂ ಪ್ರತಿಯೊಂದು ವರ್ಷದಲ್ಲಿಯೂ ಏನೇನು ಪ್ರಾಪರ್ಟಿ ಮಾಡಿದ್ದಾನೆ ಎಂದು ಅವನ ಆಸ್ತಿ ಸ್ಟೇಟ್‌ಮೆಂಟ್ ಕಳುಹಿಸುತ್ತಾನೆ. ಅದನ್ನು ರಿವ್ಯೂ ಮಾಡುವವರು ಯಾರು ಎಂಬುದನ್ನು ತಿಳಿಸಬೇಕು. ಕೆಲವು ಇಂಜನಿಯರುಗಳಿಗೆ ೬ ಮನೆಗಳನ್ನು, ೧೫ ಮನೆಕಟ್ಟಿದರು ಸಾಲದು. ವಾಸಕ್ಕೆ ಒಂದು ಮನೆ ಕಟ್ಟಿಕೊಳ್ಳುತ್ತಾರೆ, ಕಟ್ಟಿಕೊಳ್ಳಲಿ ಬಿಡಿ, ಎಂದು ಮಾನ್ಯ ಶ್ರೀ ನಿಜಲಿಂಗಪ್ಪನವರು ಹಿಂದೆ ಹೇಳುತ್ತಿದ್ದರು. ಅದೂ ಒಂದು ಹುಚ್ಚು. ಅಧಿಕಾರಿಗಳಿಗೆ ೫ ಲಕ್ಷ ೬ ಲಕ್ಷ ಆಸ್ತಿಮಾಡಿದರೂ ಸಾಲದು. ಅಧಿಕಾರಿಗಳಾಗಿರುವವರು ಅವರ ಹೆಂಡತಿ ಹೆಸರಿನಲ್ಲಿ ಒಂದು, ತಂಗಿ ಹೆಸರಿನಲ್ಲಿ ಒಂದು, ತಮ್ಮ ಹೆಸರಿನಲ್ಲಿ ಒಂದು—ಹೀಗೆ ಮನೆಗಳನ್ನು ಕಟ್ಟಿಕೊಂಡು ಆಸ್ತಿಮಾಡಿದರೆ, ಅವರಿಗೆ ದುಡ್ಡು ಎಲ್ಲಿಂದ ಬರುತ್ತದೆ? ಅವರಿಗೆ ಬರುವ ಸಂಬಳ ಎಷ್ಟು. ಹೌಸಿಂಗ್ ಬೋರ್ಡಿನಲ್ಲಿ ಒಂದು ಲಕ್ಷ ರೂಪಾಯಿ ಬೆಲೆ ಬಾಳುವಷ್ಟು ಮನೆಗಳನ್ನು ಕಟ್ಟಿಸುವುದಕ್ಕೆ ಎಷ್ಟು ದುಡ್ಡು ಅವರಿಗೆ ಎಲ್ಲಿಂದ ಬಂದಿರಬೇಕು ಎಂಬುದನ್ನು ವಿಚಾರಮಾಡಬೇಕು. ಇನ್ನು ಅವರ ಮನೆಗಳನ್ನು ನೋಡಿದರೆ, ಅವರಲ್ಲಿರತಕ್ಕ ಎಲ್ಲಾ ಫರ್ನಿಚರ್ ಲೆಕ್ಕ ತೆಗೆದುಕೊಂಡರೆ ಮತ್ತು ಅವರು ಮನೆಗಳನ್ನು ಕಟ್ಟಿರತಕ್ಕ ಆಸ್ತಿ ಪಟ್ಟಿನೋಡಿದರೆ, ಎಲ್ಲವೂ ಗೊತ್ತಾಗುತ್ತದೆ. ಅದನ್ನು ವಿಚಾರಮಾಡಬೇಕು.

ಶ್ರೀ ಎಂ.ಎಸ್. ಕೃಷ್ಣನ್:—ನಿಮ್ಮ ಸಮಾಜದೊಳಗೆ ಆ ತರಹ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ? ನಿಮ್ಮ ಸಮಾಜ ಪೂರ್ತಿಯಾಗಿ ಪರಿವರ್ತನೆಯಾಗದೆ, ಅದನ್ನು ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಎಚ್.ಡಿ. ದೇವೇಗೌಡ:—ಹಾಗಾದರೆ ಅದು ಬೇಡ. ಏನಾದರೂ ಮಾಡಿ ಪ್ರತಿಯೊಬ್ಬನು ತಾನು ಆಸ್ತಿಯನ್ನು ಅಕ್ವೈರ್ ಮಾಡಿಕೊಂಡಿರುವುದರ ಬಗ್ಗೆ ಒಂದೊಂದು ಪಟ್ಟಿ ಇಡಬೇಕು. ಆಗ ಎಲ್ಲ ವಿಚಾರಗಳೂ ಗೊತ್ತಾಗುತ್ತವೆ. ಅದರ ಬಗ್ಗೆ ಸರ್ಕಾರದವರು ಎಚ್ಚರಿಕೆ ವಹಿಸಬೇಕು. ಶೇಕಡ ೫ ಅಥವಾ ೧೦ ರಷ್ಟು ಆ ರೀತಿ ಅಧಿಕಾರಿಗಳು ಇರಬಹುದು. ಪ್ರಾಪರ್ಟಿ ಲಿಸ್ಟ್ ನೋಡಿದಾಗ ಸಂಶಯ ಬಂದರೆ ಅದನ್ನು ವಿಚಾರಮಾಡಬೇಕು. ಫ್ರೀ ಆಡಿಟ್‌ನಲ್ಲಿ ಇದನ್ನು ರಿವ್ಯೂ ಮಾಡಬೇಕೆಂದು ನಾನು ಹೇಳುತ್ತೇನೆ.

1-00P.M.

ಶ್ರೀ ಎಚ್.ಎನ್, ನಂಜೇಗೌಡ:—ಚುನಾವಣೆಗೆ ಅವರಿಗೆ ದುಡ್ಡು ಸಿಗಬೇಕಲ್ಲಾ.?

ಶ್ರೀ ಎಚ್.ಡಿ. ದೇವೇಗೌಡ:—ದುಡ್ಡು ಖರ್ಚುಮಾಡಿದರೂ ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಆಗುವುದಿಲ್ಲವೆಂಬುದು ತಮಗೆ ಗೊತ್ತಿದೆ.

ಶ್ರೀ ಎಂ. ನಾಗಪ್ಪ:—ಕಟ್ಟಾಕ್ಟ್‌ರುಗಳ ಕಾರುಗಳಾದರೂ ತಿರುಗಾಡುವುದಕ್ಕೆ ಸಿಗುತ್ತವೆ.

ಶ್ರಿ ಎಚ್.ಡಿ. ದೇವೇಗೌಡ:—ಇನ್ನು ರೂರಲ್ ಕಮ್ಯೂನಿಕೇಷನ್ಸ್ ಮತ್ತು ರೋಡ್ಸ್ ಏನಿದೆ ಅವುಗಳ ಬಗ್ಗೆ ಹೇಳುವುದಾದರೆ, ಅವನ್ನು ತಾಲ್ಲೂಕು ಬೋರ್ಡಿಗೆ ಹಾಂಡ್ ಒವರ್ ಮಾಡುತ್ತೇವೆ ನಮ್ಮಲ್ಲಿ ದುಡ್ಡು ಇಲ್ಲವೆಂದು ಹೇಳುತ್ತಾರೆ. ತಾಲ್ಲೂಕು ಬೋರ್ಡಿನ ಜನತೆ ಸೇರಿ, ಅಲ್ಲಿನ ರಸ್ತೆಗಳನ್ನು ಮೇಂಟೇನ್ ಮಾಡಿಕೊಳ್ಳಬಹುದು. ಅದಕ್ಕಾಗಿ ಅವನ್ನು ತಾಲ್ಲೂಕ್‌ಬೋರ್ಡಿಗೆ ಹ್ಯಾಂಡ್ ಓವರ್ ಮಾಡುತ್ತೇವೆ ಎಂಬುದಾಗಿ ಹೇಳುತ್ತಾರೆ.

ಅದನ್ನು ತತ್ವಶಃ ಒಪ್ಪಿಕೊಳುತ್ತೇನೆ. ಮಾನ್ಯ ಚನ್ನಬಸಪ್ಪನವರು ಸಹ ಪಿ. ಡಬ್ಲ್ಯೂ. ಡಿ. ಮಂತ್ರಿಗಳು ಆಗಿದ್ದರು. ಅವರು ಹೋದ ಒಂದು ವರ್ಷಕ್ಕೆ ಬೇರೆ ಮಂತ್ರಿಗಳು ಬಂದರು. ರಸ್ತೆಗಳು ಸರಿಯಾಗಿ ದುರಸ್ತಿ ಆಗದೆ ಅದಕ್ಕೆ ಖರ್ಚುಮಾಡಿದ ೯ ಕೋಟಿ ರೂಪಾಯಿಗಳು ನೀರಿನಲ್ಲಿ ಹೋಮ ಮಾಡಿದ ಹಾಗಾಯಿತು. ರಸ್ತೆಗಳ ದುರಸ್ತಿ ಕೆಲಸಗಳನ್ನು ತಾಲ್ಲೂಕು ಬೋರ್ಡುಗೆ ವಹಿಸಿಕೊಟ್ಟು, ಮೈಲಿಗೆ ನೂರೈವತ್ತು ರೂಪಾಯಿಗಳನ್ನು ಕೊಡುವುದಕ್ಕೆ ಬದಲಾಗಿ ವರ್ಷಕ್ಕೆ ಇಂತಿಷ್ಟು ಎಂದು ಹಣವನ್ನು ಪಿ. ಡಬ್ಲ್ಯೂ. ಡಿ. ಗೆ ಕೊಟ್ಟು ರಸ್ತೆಗಳ ದುರಸ್ತಿ ಕೆಲಸಗಳನ್ನು ಮಾಡಿಸುವುದು ಸೂಕ್ತ ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER:—The House stands adjourned and meet again at 1 P.M. on Monday, the 16th March 1970.

The House adjourned at Five Minutes Past One of the Clock to meet again at One of the Clock on Mondy the 16th March 1970.

V-, 31st N70

N70- Q5-5-10

(B) 4880

WD—14691—GPB—550—14-8-1970.